ತಿಂಗಳ ಪತ್ರಿಕೆ

ಸೆಪ್ಟೆಂಬರ್ 2001

ಅಚಲ

ಒಳಗೇನಿದೆ ?

- ಮಹಿಳಾ ಹಕ್ಕುಗಳ ಹೋರಾಟಗಾರ್ತಿ - ಎಲಿಜಬೆತ್ ಕ್ಯಾಡಿ ಸ್ಟ್ಯಾಟನ್
- ಬೇಸಾಯಗಾರ್ತಿ ಇಂದು
- ಕಾನೂನಿನ ಕಣ್ಣಿಗೆ ಮಣ್ಣೆರಚುವ ಗಂಡ
- ಹೆಣ್ಣಿಗೆ ಮುಳುವಾದ ಲಿಂಗ ಪರೀಕ್ಷೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 16 ಸಂಚಿಕೆ - 9

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by Dr. N. Gayathri

Published by Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 15 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)

ರೂ. 75/- (ಸಂಸ್ಥೆಗಳಿಗೆ)

ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)

ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಬಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಆಧುನಿಕ ದುಶ್ಶಾಸನರಿಗೆ ಏನು ಶಿಕ್ಷೆ?

ಇತ್ತೀಚೆಗೆ ಬಳ್ಳಾರಿ ಜಿಲ್ಲೆಯ ವಣೇನೂರು ಗ್ರಾಮದಲ್ಲಿ ನಡೆದ ದಲಿತ ಮಹಿಳೆ ಎರ್ರಮ್ಮನಿಗೆ ಆ ಊರಿನ ಗ್ರಾಮದ ಪ್ರತಿಷ್ಠಿತರು ವಿಧಿಸಿದ ಬೆತ್ತಲೆ ಮೆರವಣಿಗೆಯ ಶಿಕ್ಷೆ ಇಡೀ ಭಾರತೀಯ ಸಮಾಜ ತಲೆ ತಗ್ಗಿಸುವಂತಹ ಘಟನೆ. ಈ ಘಟನೆಯನ್ನು ಮಾಡಿದವರನ್ನು ದುಷ್ಟರು, ನೀಚರು, ಬರ್ಬರರು ಎಂದೆಲ್ಲ ದೂಷಿಸಬಹುದಾದರೂ ಈ ದುಷ್ಕೃತ್ಯವನ್ನು ನಿಷ್ಕ್ರಿಯವಾಗಿ ನೋಡುತ್ತಾ ನಿಂತ ಆ ಗ್ರಾಮದ ಜನತೆಯೂ ಅಷ್ಟೇ ಅಪರಾಧಿಗಳು. ಮೇಲ್ನೋಟಕ್ಕೆ ಈ ಘಟನೆ ತುಂಬಾ ಸರಳವಾಗಿ ಕಂಡರೂ, ಅದು ನಮ್ಮ ಸಮಾಜದ ಎಲ್ಲಾ ಕೊಳಕುಗಳನ್ನು ಪ್ರತಿಬಿಂಬಿಸುತ್ತದೆ.

ಯರ್ರೆಮ್ಮ ಬಡ ದಲಿತ ಹೆಣ್ಣು ಮಗಳು. ತನ್ನ ಮಗಳ ಬಾಣಂತನವನ್ನು ಮಾಡಲೆಂದು ಮಗಳ ಮನೆಗೆ ಬಂದವಳು. ಅಲ್ಲಿ ಮನೆಯೊಳಗಿರುವಾಗ, ಪಾನಮತ್ತರಾದ ಐವರು ಪುರುಷರು ಮತ್ತು ಮೂವರು ಮಹಿಳೆಯರು ಮನೆಯೊಳಗೆ ಬಂದು ಈಕೆಯನ್ನು ಚೆನ್ನಾಗಿ ಥಳಿಸಿ, ನಗ್ನಗೊಳಿಸಿ ಊರಲ್ಲಿ ಮೆರವಣಿಗೆ ಮಾಡಿದ್ದಾರೆ. ಅದಕ್ಕೆ ಅವಳ ಮೇಲಿರುವ ಆರೋಪ - ಆ ಊರಿನ ಪ್ರೇಮಿಗಳಿಬ್ಬರು ಮನೆ ಬಿಟ್ಟು ಓಡಿ ಹೋಗಿ ಮದುವೆಯಾಗಲು ನೆರವಾದದ್ದು. ಈ ಆರೋಪದ ಸತ್ಯಾಸತ್ಯತೆಯೇನೇ ಇರಲಿ, ಇಲ್ಲಿ ದಲಿತ ಹೆಣ್ಣು ಮಗಳನ್ನು ಥಳಿಸಿದವರೂ ದಲಿತರೇ ಆಗಿದ್ದಾರೆ ಮತ್ತು ಹಾಗೆ ಥಳಿಸಿ, ಬೆತ್ತಲೆಗೊಳಿಸುವ ಕಾರ್ಯದಲ್ಲಿ ಮೂವರು ಮಹಿಳೆಯರೂ ಸೇರಿದ್ದಾರೆ, ಎನ್ನುವುದು ಸಮಸ್ಯೆಯ ಗಂಭೀರತೆಯನ್ನು ಸೂಚಿಸುತ್ತದೆ.

ವಣೇನೂರಿನಲ್ಲಿ ತುಂಗಭದ್ರಾ ನದಿಯ ಕಾಲುವೆಯಲ್ಲಿ ಸಮೃದ್ಧವಾದ ನೀರಾವರಿ ಜಮೀನಿದೆ. ಈ ಜಮೀನುಗಳ ಒಡೆತನ ಬಹುಸಂಖ್ಯಾತರಾದ ವಾಲ್ಮೀಕಿ ಜನಾಂಗದವದು. ಈ ಭೂಮಿಯ ಒಡೆತನದಿಂದ ಕೊಬ್ಬಿದ ಶ್ರೀಮಂತರ ಮನೆಯ ಮಗಳು ಹೊನ್ನವ್ವ. ಅವಳು ಅವರ ಜಮೀನಿನ ಟ್ರ್ಯಾಕ್ಟರ್ ಚಾಲಕ ಕೇಶವಪ್ಪನನ್ನು ಪ್ರೀತಿಸಿ ಅವನೊಡನೆ ಊರು ಬಿಟ್ಟು ಓಡಿ ಹೋಗಿ ಮದುವೆಯಾದದ್ದು ಹೆತ್ತವರಿಗೆ ಘೋರ ಅಪರಾಧವಾಗಿ ಕಂಡಿದೆ. ಓಡಿಹೋದ ಮಗಳನ್ನು ಹಿಂದಕ್ಕೆ ಕರೆದುತಂದ ಹೆತ್ತವರು ಯುವಕ ಕೇಶವಪ್ಪನನ್ನು ನಾಪತ್ತೆಯಾಗುವಂತೆ ಮಾಡಿದ್ದಾರೆ. ಇಷ್ಟು ಸಾಲದೆಂಬಂತೆ ಇವರಿಗೆ ಸಹಾಯ ಮಾಡಿರಬಹುದೆಂದು ಭಾವಿಸಿ ಯರ್ರೆಮ್ಮನನ್ನು ಶಿಕ್ಷಿಸುವ ಜವಾಬ್ದಾರಿಯನ್ನು ತಾವೇ ಹೊತ್ತುಕೊಂಡು ಅವಳನ್ನು ಸಾರ್ವಜನಿಕವಾಗಿ ಬೆತ್ತಲೆ ಮೆರವಣಿಗೆ ಮಾಡಿಸಿದ್ದಾರೆ. ಆದರೆ ಇಂತಹ ದುಷ್ಕೃತ್ಯವೊಂದು ನಡೆಯುತ್ತಿರುವಾಗ, ಅದನ್ನು ತಡೆಗಟ್ಟದೆ ಸುತ್ತಮುತ್ತಲಿನವರೆಲ್ಲಾ ಮೂಕ ಸಾಕ್ಷಿಯಾಗಿ ನಿಂತದ್ದು ಆಶ್ಚರ್ಯಕರ ಮತ್ತು ಅವಮಾನಕರ.

ದಲಿತ ಸಂಘಟನೆಗಳಿಗೆ ಇದು ದಲಿತರ ಮೇಲಿನ ದೌರ್ಜನ್ಯವಾಗಿ ಕಂಡು ದಲಿತರಾದ ಗೃಹಸಚಿವರನ್ನು ಬದಲಾಯಿಸಬೇಕೆಂಬ ಬೇಡಿಕೆಯಿಟ್ಟರೆ, ರಾಜಕೀಯ ಪಕ್ಷಗಳು ಸರ್ಕಾರದ ಬೇಜವಾಬ್ದಾರಿತನವನ್ನು ಖಂಡಿಸಿದ್ದಾರೆ. ಅಪರಾಧಿಗಳು ಶಿಕ್ಷಿಸದೆ ಜಾಮೀನಿನ ಮೇಲೆ ಬಿಟ್ಟಿರುವ ಸರ್ಕಾರದ ಕ್ರಮ ನಿಜಕ್ಕೂ ಖಂಡನಾರ್ಹವೇನೋ ನಿಜ. ಆದರೆ ಸರ್ಕಾರವು ಕಾನೂನಿನ ಲೋಪದೋಷಗಳತ್ತ ಬೊಟ್ಟು ಮಾಡಿ ತಮ್ಮ ಕರ್ತವ್ಯ ಮುಗಿಯಿತೆಂದು ಭಾವಿಸಿದಂತಿದೆ.

ವರದಕ್ಷಿಣೆ, ಲೈಂಗಿಕ ಕಿರುಕುಳ, ಬಲಾತ್ಕಾರವನ್ನು ಅತ್ಯಂತ ದೊಡ್ಡ ದೌರ್ಜನ್ಯವೆಂದು ಪರಿಗಣಿಸುವ ನಮ್ಮ ಕಾನೂನಿನಲ್ಲಿ ಬೆತ್ತಲೆ ಮಾಡಿ ಮೆರವಣಿಗೆ ಮಾಡುವುದು ಅಷ್ಟೊಂದು ದೊಡ್ಡ ಅಪರಾಧವಾಗಿ ಕಂಡುಬಂದಿಲ್ಲವೇನೋ! ಹಾಗೆಂದು ಇಂತಹ ಘಟನೆಗಳು ಇದೇನು ಹೊಸತಲ್ಲ. ಹಿಂದೆ ಉತ್ತರ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿಯೆದುರು ಮಹಿಳೆಯೊಬ್ಬಳನ್ನು ಬೆತ್ತಲುಗೊಳಿಸಿ ಥಳಿಸಿದ ಘಟನೆ ಇನ್ನೂ ನೆನಪಿನಲ್ಲೇ ಇದೆ. ಕರ್ನಾಟಕದಲ್ಲೂ ರಾಯಚೂರಿನ ಕುದುರೆ ಮೋತಿಯ ಮಹಂತ ಸ್ವಾಮಿಗಳು ಆ ಊರಿನ ಶಾಲಾಶಿಕ್ಷಕರ ಪತ್ನಿ ಪಾರ್ವತಮ್ಮನನ್ನು ತನಗೆ ಒಲಿಯದಿದ್ದುದಕ್ಕಾಗಿ ನಗ್ನಗೊಳಿಸಿ ಮೆರವಣಿಗೆ ಮಾಡಿಸಿದ್ದ. ಅದೇ ದುಶ್ಶಾಸನರ ಪರಂಪರೆ ಇಗಲೂ ಮುಂದುವರೆದಿದೆ. ಈ ದುಶ್ಶಾಸನರಿಗೆ ಶಿಕ್ಷೆಯಾಗುವಂತಹ ಸಮರ್ಪಕ ಮಸೂದೆಯೊಂದರ ಅಗತ್ಯವಿದೆ.

ಮಹಿಳೆಯನ್ನು ಬೆತ್ತಲೆ ಮಾಡಿದವರಷ್ಟೇ ಅಪರಾಧಿಗಳಲ್ಲ, ಆ ಘಟನೆಗೆ ಮೂಕ ಸಾಕ್ಷಿಯಾಗಿ ನಿಂತ ಇಡೀ ಗ್ರಾಮದ ಜನತೆಗೆ ಪುಂಡುಗಂದಾಯವನ್ನು ಹಾಕಬೇಕೆಂದು ಜಿಲ್ಲಾಧಿಕಾರಿಗಳಿಗೆ ಸರ್ಕಾರ ಆದೇಶಿಸಿದೆ. ಇನ್ನು ಮುಂದೆ ಇಂತಹ ಘಟನೆಗಳು ಘಟಿಸದಂತೆ ನೋಡಿಕೊಳ್ಳಲು ಸಂಘಟಿತ ಅಪರಾಧ ನಿಯಂತ್ರಣ ಮಸೂದೆಯನ್ನು ಎರಡೂ ಸದನಗಳಲ್ಲಿ ಅಂಗೀಕಾರವಾದ ನಂತರ ರಾಷ್ಟ್ರಪತಿ ಸಹಿಗಾಗಿ ಕಳುಹಿಸಿಕೊಡಲಾಗಿದೆ. ಇವೆಲ್ಲದರ ಜೊತೆಗೆ ಸರ್ಕಾರ ತುರ್ತಾಗಿ ರಾಜ್ಯದಲ್ಲಿ ಮಹಿಳಾ ಆಯೋಗವನ್ನು ರಚಿಸಬೇಕಾಗಿದೆ. ಕೊನೆಗೆ, ವೋಟಿನ ರಾಜಕೀಯದಲ್ಲಿ ನಿಜವಾದ ಮಹಿಳಾಪರ ಕಾಳಜಿ ಕರಗಿ ಹೋಗದಂತೆ ನೋಡಿಕೊಳ್ಳಬೇಕಾದ ಮಹತ್ತರ ಜವಾಬ್ದಾರಿ ಜನಸಮುದಾಯದ ಅಂತಃಚೇತನದಲ್ಲಿ ಮೂಡಬೇಕಿದೆ.

ತೆಹಲ್ಕಾ ಮತ್ತು ವೇಶ್ಯೆಯರು

ಕೆಲವು ತಿಂಗಳ ಹಿಂದೆ ಭಾರತದ ರಕ್ಷಣಾ ವ್ಯವಹಾರ ಸಂಬಂಧದಲ್ಲಿ ನಡೆದಿದೆಯೆನ್ನಲಾದ ಲಂಚ ಪ್ರಕರಣಗಳನ್ನು ಯಶಸ್ವಿಯಾಗಿ ಬೆಳಕಿಗೆ ತಂದ ಕೀರ್ತಿಗೆ ಪಾತ್ರರಾದ ತೆಹಲ್ಕಾ ತಂಡ ಮತ್ತೊಂದು ಹೊಸ ಆರೋಪಕ್ಕೆ ಗುರಿಯಾಗಿ ಇತ್ತೀಚೆಗೆ ಸುದ್ದಿಗೆ ಬಂದರು. ರಕ್ಷಣಾ ಅವ್ಯವಹಾರಗಳನ್ನು ಬಯಲಿಗೆಳೆಯುವ ಕಾರ್ಯದಲ್ಲಿ ಮೂವರು ರಕ್ಷಣಾ ಅಧಿಕಾರಿಗಳಿಗೆ ಹಣದ ಆಮಿಷದೊಡನೆ ವೇಶ್ಯೆಯರನ್ನೂ (ಲೈಂಗಿಕ

ಕಾರ್ಯಕರ್ತರು) ಆಮಿಷವಾಗಿ ಬಳಸಿಕೊಂಡಿದ್ದರೆಂದು ವೆಂಕಟಸ್ವಾಮಿ ಆಯೋಗಕ್ಕೆ ನೀಡಿರುವ ಟೇಪುಗಳಲ್ಲಿ ಕಂಡು ಬಂದ ಮಾಹಿತಿಗಳು ತಿಳಿಸಿದವು. ಭಾರತೀಯ ಸಂಸ್ಕೃತಿಯ ಗುತ್ತಿಗೆ ತೆಗೆದುಕೊಂಡಂತೆ ಬೀಗುವ ಅಧಿಕಾರಾರೂಢ ಭಾರತೀಯ ಜನತಾ ಪಕ್ಷ ಮತ್ತು ಅವರ ಮೈತ್ರಿ ಕೂಟ 'ಹೆಣ್ಣಿನ ಶೀಲ'ದ ಬಗ್ಗೆ ತಮ್ಮ ಅಪಾರ ಕಾಳಜಿಯನ್ನು ಮೆರೆದವು. ಎಲ್ಲಾ ಪ್ರಮುಖ ಪತ್ರಿಕೆಗಳೂ ತೆಹಲ್ಕಾ ಹೊರತಂದ ಲಂಚಪ್ರಕರಣಕ್ಕೆ ಕೊಟ್ಟಷ್ಟೇ ಪ್ರಚಾರ ಪ್ರಾಮುಖ್ಯತೆಯನ್ನು ತೆಹಲ್ಕಾ ಸಂಶೋಧನೆಯಲ್ಲಿ ವೇಶ್ಯೆಯರ ಅಪಬಳಕೆಯ ವಿಷಯಕ್ಕೂ ನೀಡಿದವು. ಒಟ್ಟಿನಲ್ಲಿ ಲಂಚಕೋರರ ಅಪರಾಧವನ್ನು ಜನ ಮನದಿಂದ ದೂರ ಸರಿಸುವಂತಹ ಪ್ರಯತ್ನ ಯಶಸ್ವಿಯಾಗಿ ನಡೆಯಿತು. ಪತ್ರಿಕಾಧರ್ಮದ ನೈತಿಕತೆಯ ಬಗ್ಗೆ ಸಾರ್ವಜನಿಕವಾಗಿ ಚರ್ಚೆಸಂವಾದಗಳು ನಡೆದವು. ಈ ಚರ್ಚೆಗಳ ಬೆಳಕಲ್ಲಿ ಕೆಲವು ಮೂಲಭೂತ ಸತ್ಯಗಳು ಪ್ರಾಮುಖ್ಯತೆಯನ್ನು ಕಳೆದುಕೊಂಡವು.

ವೇಶ್ಯೆಯರನ್ನು ಪತ್ರಿಕಾ ಸಂಶೋಧನೆಗೆ ಬಳಸಬಾರದೆಂಬ ನೈತಿಕ ಪ್ರಶ್ನೆಯನ್ನು ಎತ್ತುವಾಗ ವೇಶ್ಯೆಯರ ಸ್ಥಿತಿಗತಿಯ ಬಗೆಗಾಗಲೀ, ಅವರ ಸಮಸ್ಯೆಗಳ ಬಗೆಗಾಗಲೀ ಕಾಳಜಿ ವ್ಯಕ್ತವಾದದ್ದು ಕಂಡು ಬರಲಿಲ್ಲ. ಹಾಗೆಯೇ ಲಂಚ, ಆಮಿಷಗಳಿಗೆ ಒಳಗಾದ ಸೇನಾನಾಯಕರು ಮತ್ತು ರಾಜಕಾರಣಿಗಳ ಹಿಪೋಕ್ರಸಿಯಾಗಲಿ, ಹಣದ ಲಾಲಸೆಯಾಗಲೀ ಇಲ್ಲಿ ಖಂಡನೀಯ ವಿಚಾರಗಳಾಗಲಿಲ್ಲ. ಒಟ್ಟಿನಲ್ಲಿ ವೇಶ್ಯೆಯರನ್ನು ಕುರಿತ ಚರ್ಚೆ ತೆಹಲ್ಕಾ ಲಂಚ ಪ್ರಕರಣವನ್ನು ಮುಚ್ಚಿ ಹಾಕುವ ಜನಮನದಿಂದ ಅಳಿಸಿಹಾಕುವ ಪ್ರಯತ್ನಕ್ಕೆ ನೆಪವಾಯಿತಷ್ಟೆ.

ವೇಶ್ಯೆಯರನ್ನು ಪತ್ರಿಕಾ ಸಂಶೋಧನೆಗೆ ಬಳಸಿದ್ದು ಸರಿಯೆಂದು ಈ ವಾದದ ಅರ್ಥವಲ್ಲ. ಈ ಲಂಚ ಅವ್ಯವಹಾರ ಬೆಳಕಿಗೆ ತರುವ ಕಾರ್ಯಕ್ಕೆ ವೇಶ್ಯೆಯರನ್ನು ಬಳಸಿಕೊಂಡಿರದಿದ್ದರೆ ಆ ವೇಶ್ಯೆಯರ ಸ್ಥಿತಿಗತಿಗಳು ಬದಲಾಗುತ್ತಿದ್ದವೆಂದೂ ಅರ್ಥವಲ್ಲ. ತಮ್ಮನ್ನು ಲೈಂಗಿಕ ಕಾರ್ಯಕರ್ತರೆಂದೂ ಕರೆದುಕೊಳ್ಳಬಯಸುವ ಈ ವೇಶ್ಯೆಯರು ಈ ಮಾರ್ಗದಿಂದಲ್ಲದಿದ್ದರೆ ಮತ್ತೆ ಹೇಗಾದರೂ ತಮ್ಮ ಕೆಲಸ ನಡೆಸಿ ಹಣ ಸಂಪಾದಿಸುತ್ತಿದ್ದರು. ಹಾಗೆಯೇ ತೆಹಲ್ಕಾ ತಂಡವೂ ಕೂಡ ಏನೂ ಅರಿಯದ ಮುಗ್ಧ ಹೆಣ್ಣುಮಕ್ಕಳನ್ನು ಈ ಕಾರ್ಯಕ್ಕೆ ಬಲವಂತವಾಗಿ ತೊಡಗಿಸಿಕೊಂಡಿಲ್ಲವೆನ್ನುವುದು ಗಮನಿಸಬೇಕಾದ ಅಂಶ.

ಸಂಸ್ಕೃತಿಯ ಪ್ರಶ್ನೆ ಬಂದಾಗ ಎಲ್ಲ ವಿನಾಶಗಳಿಗೂ, ಪಾಪ ಕಾರ್ಯಗಳಿಗೂ ಹೆಣ್ಣನ್ನು ಕಾರಣವಾಗಿಸುವುದು ನಮ್ಮಲ್ಲಿ ರೂಢಿ, ಹಾಗೆಯೇ ತೆಹಲ್ಕಾ ಪತ್ರಿಕಾ ಸಂಶೋಧನೆಯನ್ನು ಖಂಡಿಸುವಾಗಲೂ ಹೆಣ್ಣನ್ನು ನೆಪವಾಗಿಸಿ ತಮ್ಮ ಪಾಪ ಕಾರ್ಯವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಪತ್ರಿಕೆಗಳೂ ಕೂಡ ತೆಹಲ್ಕಾ ಮಾಡಿದಂತಹ ಸಂಶೋಧನಾ ಕೆಲಸವನ್ನು ಮಾಡಬೇಕಾದ ಜವಾಬ್ದಾರಿಯಿಂದ ನುಣುಚಿಕೊಂಡು 'ಹೆಣ್ಣಿನ ಶೀಲ'ದ ರಕ್ಷಣೆಗೆ ಮುಂದಾಗಿದ್ದಾರೆ.

ಬುರ್ಖಾ ಮತ್ತು ತಾಲಿಬಾನೀಕರಣ

ಕಾಶ್ಮೀರಿ ಮಹಿಳೆಯರಿಗೆ ಈ ಸೆಪ್ಟೆಂಬರ್ ತಿಂಗಳು ಮರೆಯಲಾಗದ ದುಸ್ವಪ್ನದ ಮಾಸ. ಕಾಶ್ಮೀರಿ ಸಂಸ್ಕೃತಿಯ ಉದಾರ ಮೌಲ್ಯ, ನೀತಿಗಳಿಂದಾಗಿ ಎಂದೆಂದೂ ಬಂಧನಕ್ಕೊಳಪಡದ ಕಾಶ್ಮೀರಿ ಮಹಿಳೆಯರಿಗೆ ಕಳೆದ ದಶಕವಂತೂ ಅತ್ಯಂತ ನೋವಿನ ಕ್ಷಣಗಳಿಂದಲೇ ಕೂಡಿದೆ. ಆತಂಕವಾದಿಗಳು ಕಾಶ್ಮೀರದ ಕಣಿವೆಯನ್ನು ಭಯೋತ್ಪಾದಕ ಕೃತ್ಯಗಳಿಂದ ಮುಳುಗಿಸಿ ಅಲ್ಲಿನ ಜನಗಳಿಗೆ ಬದುಕೇ ಇಲ್ಲದಂತೆ ಮಾಡಿರುವುದು ಒಂದು ಕಡೆಯಾದರೆ, ಅಲ್ಲಿ ಆಳಿದ ಎಲ್ಲಾ ಸರ್ಕಾರಗಳು ತಮ್ಮ ಮಿಲಿಟರಿ ಶಕ್ತಿಯ ಮೂಲಕ ಜನರ ಬದುಕನ್ನು ಕತ್ತಲ ಕೂಪಕ್ಕೆ ತಳ್ಳಿದ್ದಾರೆ. ಈ ನೋವಿನ ಕೂಪದಲ್ಲಿ ನೊಂದವರಲ್ಲಿ ಮಹಿಳೆಯರೇ ಹೆಚ್ಚು.

ಈಗ ಉದ್ಭವವಾಗಿರುವ ಹೊಸ ಸಮಸ್ಯೆಯೆಂದರೆ ಆಫ್‌ಘಾನಿಸ್ತಾನದ ತಾಲೀಬಾನ್ ಸರ್ಕಾರ ತನ್ನ ಮಹಿಳೆಯರ ಮೇಲೆ ನಡೆಸಿರುವ ದೌರ್ಜನ್ಯ ಸಾಲದೆಂಬಂತೆ ಅದರ ಬಿಸಿಯನ್ನು ಆಚೆಗೂ ಹರಿಸಿದೆ. ಅಲ್ಲಿನ ಕೃಪಾಪೋಷಿತ ಕಾಶ್ಮೀರದ ಲಷ್ಕರ ಇ ಜಬ್ಬರ್ ಮುಸ್ಲಿಂ ಉಗ್ರವಾದಿ ಸಂಘಟನೆ ಕಾಶ್ಮೀರಿ ಮಹಿಳೆಯರಿಗೆ ವಸ್ತ್ರ ಸಂಹಿತೆಯನ್ನು ವಿಧಿಸಿ ಅದರ ಗಡುವನ್ನು ಸೆಪ್ಟೆಂಬರ್ ಒಂದನ್ನಾಗಿ ನಿಗಧಿಗೊಳಿಸಿತ್ತು ಮತ್ತು ಹತ್ತಕ್ಕೆ ವಿಸ್ತರಿಸಿತು. ಮಹಿಳೆಯರು ಮತ್ತು ಮಕ್ಕಳೆಲ್ಲಾ ಬುರ್ಖಾ ಧರಿಸಬೇಕೆಂದೂ ಇಲ್ಲದಿದ್ದರೆ ಆ್ಯಸಿಡ್ ಎರಚಿ ಮುಖ ವಿರೂಪಗೊಳಿಸುವ ಬೆದರಿಕೆ ಹಾಕಲಾಗಿದೆ. ಈ 'ವಸ್ತ್ರಸಂಹಿತೆ'ಯನ್ನು ಗೌರವಿಸದೆ ಇದ್ದ ಕೆಲವು ಮಹಿಳೆಯರಿಗೆ ಈಗಾಗಲೇ ಆ್ಯಸಿಡ್ ಎರಚಿ ವಿರೂಪಗೊಳಿಸಿದ ಘಟನೆಗಳು ಹಿಂದೆ ನಡೆದಿದೆ. ಇಂದು ಕಾಶ್ಮೀರದಲ್ಲಿ ಬುರ್ಖಾ ಧರಿಸಲು ಹಣವಿಲ್ಲದ ಬಡಜನತೆಯೇ ಹೆಚ್ಚು ತುಂಬಿದ್ದಾರೆ. 'ಮಹಿಳೆಯರು ಬುರ್ಖಾ ಧರಿಸಬೇಕೆಂದು ಹೇಳುವವರೇ ಅವರಿಗೆ ಬುರ್ಖಾಗಳನ್ನು ಒದಗಿಸಲಿ. ಏಕೆಂದರೆ ಕಾಶ್ಮೀರದಲ್ಲಿ ಬುರ್ಖಾ ಕೊಳ್ಳಲು ಕೂಡ ಹಣವಿಲ್ಲದಷ್ಟು ಬಡವರಿದ್ದಾರೆ'. ಎನ್ನುವ ಕಾಶ್ಮೀರದ ಮಹಿಳಾ ಅಭಿವೃದ್ಧಿ ಸಂಘಟನೆಯ ಮಮ್ತಾಜ್ ಜೇಹನ್ ಮಾತಿನ ಹಿಂದಿರುವ ನೋವು ಇಲ್ಲಿ ಗಮನಿಸಬೇಕು. ನೆರೆಯ ರಾಜ್ಯಗಳ ಮುಸ್ಲಿಂ ಮಹಿಳೆಯರಿಗೆ ಇಲ್ಲದ ಬುರ್ಖಾ ಖಡ್ಡಾಯ ಕಾಶ್ಮೀರಿ ಮಹಿಳೆಯರಿಗೆ ಮಾತ್ರ ಏಕೆ? ಕಾಶ್ಮೀರವನ್ನು ತನ್ನ ಕಪಿ ಮುಷ್ಟಿಯಲ್ಲಿರಿಸಿಕೊಳ್ಳಲು ಮತ್ತು ಆ ಪುಟ್ಟ ರಾಜ್ಯದ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಲು ಭಯೋತ್ಪಾದಕರು ನಡೆಸಿರುವ ತಂತ್ರವಿದು. ಆದರೆ ಒಂದಂತೂ ನಿಜ, ಬುರ್ಖಾ ಧರಿಸುವುದಕ್ಕೆ ಕಾಶ್ಮೀರಿ ಮಹಿಳೆಯರು ಶರಣಾಗುವುದು ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುವುದರ ಮೊದಲ ಹೆಜ್ಜೆ. ಆನಂತರ ಅವರು ಸಂಪೂರ್ಣ ಕತ್ತಲೆಯ ಪರದೆಯಲ್ಲಿ ಅಡಗಿಕೊಂಡು ಜೀವನವನ್ನೇ ಕತ್ತಲಾಗಿಸಿಕೊಳ್ಳಬೇಕಾಗುತ್ತದೆ. ಅಂತರರಾಷ್ಟ್ರೀಯವಾಗಿ ಭಯೋತ್ಪಾದನೆಯ ವಿರುದ್ಧ ಹೋರಾಡುತ್ತೇನೆನ್ನುವ ಭಾರತ ಸರ್ಕಾರ ಮೊದಲು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಮಾನವ ಹಕ್ಕುಗಳನ್ನು ಪ್ರೀತಿಸುವ, ಗೌರವಿಸುವ ಎಲ್ಲಾ ಶಾಂತಿಪ್ರಿಯ ಜನರೂ ಕಾಶ್ಮೀರಿ ಮಹಿಳೆಯರ ತಾಲಿಬಾನೀಕರಣದ ವಿರುದ್ಧ ಒಕ್ಕೊರಲಿನಿಂದ ಪ್ರತಿಭಟಿಸಬೇಕು.

– ಎನ್. ಗಾಯತ್ರಿ

'ಮಹಿಳಾ ಹಕ್ಕುಗಳ ಹೋರಾಟಗಾರ್ತಿ' ಎಲಿಜಬೆತ್ ಕ್ಯಾಡಿ ಸ್ಟ್ಯಾಟನ್

- ನೇಮಿಚಂದ್ರ,

ಅಮೆರಿಕದಲ್ಲಿನಾನು ಮೊದಲೇ ನೋಡಬೇಕೆಂದು ಬಯಸಿದ ಸ್ಥಳ 'ಸೆನೆಕಾ ಫಾಲ್ಸ್'. ಸೆನೆಕಾ ಫಾಲ್ಸ್ ಚಾರಿತ್ರಿಕ ತಾಣ. ಮಹಿಳಾ ಹಕ್ಕುಗಳ ಚಳುವಳಿ ಜನ್ಮತಳೆದ ತಾಣ. ಇಲ್ಲಿ 153 ವರ್ಷಗಳ ಹಿಂದೆ ಮೊಟ್ಟ ಮೊದಲ ಮಹಿಳಾ ಹಕ್ಕುಗಳ ಸಮಾವೇಶ ನಡೆದಿತ್ತು, ಅಮೆರಿಕದ ಮಹಿಳೆಯರ ಚಳುವಳಿಗೆ ಚಾಲನೆ ನೀಡಿತ್ತು. ಇದರ ಮುಂದಾಳತ್ವವನ್ನು ವಹಿಸಿದಾಕೆ, ಎಲಿಜಬೆತ್ ಕ್ಯಾಡಿ ಸ್ಟೇಟನ್.

ಈಕೆ ಸಾಮಾನ್ಯ ಮಹಿಳೆಯಲ್ಲ. ಆದರೆ ಈಕೆಯ ಆಸೆಗಳು, ಆಕಾಂಕ್ಷೆಗಳು, ಅತೃಪ್ತಿಗಳು, ಬದುಕಿನ ಸಂಕೀರ್ಣಗಳು, ವೈಯಕ್ತಿಕ ತುಯ್ದಾಟಗಳೆಲ್ಲ ಮಹಿಳೆಯರ ಸಾರ್ವತ್ರಿಕ ಸ್ಥಿತಿಯನ್ನು ಪ್ರತೀಕಿಸಿದ್ದವು. ಇಡೀ ಚಳುವಳಿ ಈ ಏಕ ವ್ಯಕ್ತಿಯಲ್ಲಿ ಅಭಿವೃದ್ಧಿ ಪಡೆದಿತ್ತು. ಈಕೆ ಇಡೀ ಚಳುವಳಿಯ ಪ್ರತೀಕವಾಗಿದ್ದಳು. ತನ್ನ ಕಾಲದ ಮಹಿಳೆಯರಿಗಿದ್ದ ಸೀಮಿತ ಅವಕಾಶಗಳಾಚೆಗೆ ಈ ಮಹಿಳೆಯ ಆಸಕ್ತಿಗಳಿದ್ದವು. ಅಡಿಗೆ, ಹೊಲಿಗೆ ಕಸೂತಿಗಳಾಚೆಗೆ ಈಕೆಗೆ ಸಾಮರ್ಥ್ಯವಿತ್ತು. ಸ್ವತಂತ್ರವಾಗಿ ಬದುಕುವ, ಹೊಣೆಗಾರಿಕೆ ಹೊರಬಲ್ಲ ಈಕೆಯ ಸಾಮರ್ಥ್ಯವೆಲ್ಲ ಹೆಣ್ತನದ ಸಾಂಪ್ರದಾಯಿಕ ಕೆಲಸಗಳಡಿಯಲ್ಲಿ ಹೊಸಕಿ ಬಿದ್ದಿತ್ತು. ಅಮೆರಿಕದ ಬಹಳಷ್ಟು ಮಹಿಳೆಯರ ಅತೃಪ್ತಿಯನ್ನು ಈಕೆ ಹೊರಹಾಕಿದ್ದಳು. ಈಕೆ ಮಹಿಳಾ ಹಕ್ಕುಗಳ ಚಳುವಳಿಯ ಸ್ಥಾಪಕಿ ಮತ್ತು ಚಿಂತಕಿ. ಚಳುವಳಿಯ ಸಿದ್ಧಾಂತಗಳನ್ನು, ಉದ್ದೇಶವನ್ನು ರೂಪಿಸಿದ ಈಕೆ, ಚಳುವಳಿಯ ಪ್ರಮುಖ ಬರಹಗಾರ್ತಿ ಮತ್ತು ಭಾಷಣಗಾರ್ತಿ. ಮಹಿಳೆಯ ಅಧೀನ, ಅಪ್ರಧಾನ ಸ್ಥಿತಿಗೆ ಕಾರಣಗಳನ್ನು ಶೋಧಿಸಿದಾಕೆ. ಎಲಿಜಬೆತಳ ಧೋರಣೆಗಳು, ಲವಲವಿಕೆಯ ವಿಚಾರಗಳು, ಸೂಕ್ಷ್ಮ ಒಳನೋಟಗಳು ಅಂದಿಗಷ್ಟೇ ಅಲ್ಲ, ಇಂದಿಗೂ ಪ್ರಸ್ತುತವಾಗಿವೆ. ಮಹಿಳೆಯ ಪೂರ್ಣ ವಿಕಾಸದತ್ತ ಚಳುವಳಿಯನ್ನು ಕೊಂಡೊಯ್ದ ಪ್ರಮುಖ ವ್ಯಕ್ತಿ ಎಲಿಜಬೆತ್ ಸ್ಟೇಟನ್.

ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ ಹುಡುಗಿಯರಿಗೆ ತೆರೆದಿದ್ದ ಹಾದಿಯೊಂದೇ - ಒಂದಿಷ್ಟು ವಿದ್ಯಾಭ್ಯಾಸ ನಂತರ ಮದುವೆ. ಅಲ್ಲಿಂದ ಮುಂದೆ ಮಹಿಳೆಯರ ಇಡೀ ಬದುಕು ಅಡಿಗೆ ಮನೆಗೆಲಸದಲ್ಲಿ, ಮಕ್ಕಳ ಆರೈಕೆಯಲ್ಲಿ ಮುಳುಗಿ ಹೋಗುತ್ತಿತ್ತು. ಇಂತಹ ಸೀಮಿತ ಬದುಕು ಎಲಿಜಬೆತಳ ಬೌದ್ಧಿಕ ಸಾಮರ್ಥ್ಯವನ್ನು, ಪುಟಿಯುವ ಉತ್ಸಾಹವನ್ನು ಹಿಡಿದಿಡುವಂತಿರಲಿಲ್ಲ. ಹೆಣ್ಣುಮಕ್ಕಳ ಬದುಕನ್ನು ಹಿಡಿದಿಟ್ಟ, ಅದುಮಿಟ್ಟ ಅಂಶಗಳು ಎಲಿಸಬೆತಳಿಗೆ ಅತಿ ಚಿಕ್ಕ ವಯಸ್ಸಿಗೇ ಅರಿವಾಗಿತ್ತು. ಅವುಗಳನ್ನು ಮೌನವಾಗಿ ಸ್ವೀಕರಿಸಲು. ವಿಧೇಯವಾಗಿ ವಿನಯದಿಂದ ಅನುಸರಿಸಲು ನಿರಾಕರಿಸಿದಳು. ಬದಲು ಕೋಪದಿಂದ ತಿರುಗಿ ಪ್ರಶ್ನಿಸತೊಡಗಿದಳು.

1815ರಲ್ಲಿ ನ್ಯೂಯಾರ್ಕ್ ರಾಜ್ಯದ ಜಾನ್ಸ್‌ಟೌನನಲ್ಲಿ ಎಲಿಜಬೆತ್ ಹುಟ್ಟಿದಳು. ಮನೆಯಲ್ಲಿ ತಂದೆತಾಯಿಗಳ ಬಿಗಿಯಾದ ಕಟ್ಟುಪಾಡಿನಲ್ಲಿ ಎಲಿಜಬೆತ್ ಬೆಳೆದಳು. ಈಕೆಯ ತಂದೆ ಪ್ರತಿಷ್ಠಿತ ನ್ಯಾಯವಾದಿ. ನ್ಯೂಯಾರ್ಕ್ 'ಶಾಸನ ಸಭೆ'ಯ ಸದಸ್ಯ. ಕ್ಯಾಡಿಯ ಮನೆಯ ವಾತಾವರಣ ಆ ಕಾಲಕ್ಕೆ ಸಾಮಾನ್ಯವಿದ್ದ, ಅತಿ ಶಿಸ್ತಿನ ವಾತಾವರಣ. ತಾಯ್ತಂದೆಯರು, ಶಿಕ್ಷಕರು, ಪಾದ್ರಿಗಳು ಎಲ್ಲರೂ ಮಕ್ಕಳ ಸಹಜ ಹುರುಪು, ಹುಮ್ಮಸ್ಸಿಗೆ ಕಡಿವಾಣ ಹಾಕಿ ಸದಾ ಮಿತಿಯನ್ನು, ಸೀಮೆ ಸರಹದ್ದನ್ನು ವಿಧಿಸುತ್ತಿದ್ದರು. ಈಕೆಯ ಬಾಲ್ಯದ ಬದುಕಿನ ಹತಾಷೆ ಮತ್ತು ವಿಷಣ್ಣತೆಗೆ ಮುಖ್ಯ ಕಾರಣ ಸ್ಕಾಚ್ ಪ್ರಿಸ್ಬಿಟೇರಿಯನ್ ಚರ್ಚ್ ಆಗಿತ್ತು. ಈಕೆಯ ಕುಟುಂಬ ಈ ಚರ್ಚಿಗೆ ಸೇರಿತ್ತು. 'ಎಲ್ಲವೂ ಮೊದಲೆ ನಿರ್ಧರಿಸಿಲ್ಪಟ್ಟಿದೆ, ವಿಧಿಸಲ್ಪಟ್ಟಿದೆ, ಶಾಶ್ವತ ನರಕ ಕಾದಿದೆ' ಎಂಬ ಕೊನೆಯಿಲ್ಲದ ಧರ್ಮೋಪನ್ಯಾಸಗಳು, ಈ ಚರ್ಚಿನ ನಿರಾಶಾವಾದದ ಉತ್ಸಾಹ ಶೂನ್ಯ ವಿಚಾರಗಳು ಎಲಿಜಬೆತಳಲ್ಲಿ ಅತಿಯಾದ ಖಿನ್ನತೆಯನ್ನು ಮೂಡಿಸಿತು, ವಿಪರೀತದ ಭೀತಿಯನ್ನು ಹುಟ್ಟಿಸಿತು. ಬೆಳೆದಂತೆ ಈ ಧಾರ್ಮಿಕ ಭೀತಿಗಳು ಅನುಮಾನಗಳಾಗಿ ಕಾಡಿ, ಮಹಿಳೆಯರ ಬದುಕಿನ ಮೇಲೆ ಧರ್ಮದ ಪ್ರಭಾವವನ್ನು ಕಂಡಾಗ, ಕೋಪವಾಗಿ ಪರಿವರ್ತಿಸಿತು.

ಬಾಲ್ಯದಲ್ಲಿಯೇ ಎಲಿಜಬೆತಳಿಗೆ, 'ಹೆಣ್ಣು ಮಗುವಾಗಿರುವ ಕಾರಣಕ್ಕೆ' ಎದುರಾಗುವ ಅಡ್ಡಿ ಅನಾನುಕೂಲಗಳು ಅರ್ಥವಾಗಿತ್ತು. ಈಕೆ ಆರು ಮಕ್ಕಳ ಕುಟುಂಬದಲ್ಲಿ ಹುಟ್ಟಿದವಳು. ಐದು ಜನ ಹೆಣ್ಣು ಮಕ್ಕಳು ಮತ್ತು ಏಕ ಮಾತ್ರ ಪುತ್ರ. ಹೆಣ್ಣು ಮಕ್ಕಳಿಗೆಲ್ಲ ಬಲುಬೇಗನೆ ಅರ್ಥ ಮಾಡಿಸಿದ್ದರು, ಅವರೆಲ್ಲರಿಗಿಂತಲೂ ಆ ಒಬ್ಬ ಗಂಡು ಹುಡುಗ ಬಹಳ ಮುಖ್ಯನೆಂದು. ತಂದೆ ಕ್ಯಾಡಿಯ ಭರವಸೆ, ಭವಿಷ್ಯ, ನಿರೀಕ್ಷೆ, ಮನೆತನ ಮುಂದುವರೆಸುವ ಕನಸುಗಳೆಲ್ಲವೂ ಮಗನ ಮೇಲಿತ್ತು. ಆದರೆ ಈ ಹುಡುಗ ರೋಗಕ್ಕೆ ಬಲಿಯಾಗಿ ತೀರಿಕೊಂಡ.

ತಂದೆಯ ಗೋಳಿಗೆ ಕೊನೆ ಇರಲಿಲ್ಲ. ಹನ್ನೊಂದು ವರ್ಷದ ಎಲಿಜಬೆತ್ ತಂದೆಯನ್ನು ಸಮಾಧಾನ ಮಾಡಲು ಇನ್ನಿಲ್ಲದಂತೆ ಪ್ರಯತ್ನಿಸಿದಳು. ಆತ ಭಾರದ ದನಿಯಿಂದ ಹೇಳಿದ್ದ 'ಓ ನನ್ನ ಮಗಳೆ, ನೀ ಗಂಡಾಗಬಾರದಿತ್ತೆ'. 'ಗಂಡುಮಕ್ಕಳಿಗೇಕೆ ಇಷ್ಟು ಪ್ರಾಮುಖ್ಯದ ಎಲಿಜಬೆತ್‌ಳನ್ನು ಕಾಡಿ? ಪ್ರಶ್ನೆ. ಬಹುಶಃ ಅವರು ಕಲಿತವರಾದ ಕಾರಣಕ್ಕಿರಬಹುದೆ, ಅವರು ಧೈರ್ಯವಂತರೆಂಬ ಕಾರಣವೆ? ಯೋಚಿಸುತ್ತಿದ್ದಳು. ಎಲಿಜಬೆತಳಲ್ಲಿ ದಿಟ್ಟತನಕ್ಕೇನೂ ಕೊರತೆ ಇರಲಿಲ್ಲ. ಕುದುರೆ ಸವಾರಿ ಕಲಿತಳು, ಗಂಡು ಹುಡುಗರ ಕಸರತ್ತುಗಳನ್ನೆಲ್ಲ ಕಲಿತಳು. ಆದರೆ 'ಕಲಿತ'ವಳಾಗುವುದ್ಹೇಗೆ?

ಗ್ರೀಕ್ ಭಾಷೆಯ ಅಭ್ಯಾಸ ಆರಂಭಿಸಿದಳು. ಜಾನ್ಸ್‌ಟೌನ್ ಅಕಾಡೆಮಿಯಲ್ಲಿ ಓದುತ್ತಿದ್ದ ಹುಡುಗರ ನಡುವೆ ಈಕೆಯೊಬ್ಬಳೇ ಲ್ಯಾಟಿನ್, ಗ್ರೀಕ್ ಮತ್ತು ಗಣಿತ ಕಲಿಯತೊಡಗಿದ ಹುಡುಗಿ. ಎಲಿಜಬೆತ್‌ಳಿಗೆ ಗ್ರೀಕ್ ಭಾಷೆಯಲ್ಲಿ ಅತ್ಯಧಿಕ ಅಂಕಗಳಿಗಾಗಿ ಬಹುಮಾನ ಕೂಡಾ ದೊರೆಯಿತು. ಎಲಿಜಬೆತ್, ಈ ಬಹುಮಾನವನ್ನು ಹಿಡಿದು ಅಸಾಧ್ಯ ಖುಷಿಯಿಂದ ಮನೆಗೋಡಿ ಬಂದು ಅಪ್ಪನಿಗೆ ತೋರಿಸಿದಳು. ತಂದೆಗೆ ಒಂದಿಷ್ಟು ಸಂತಸವಾದರೂ, ಮತ್ತೆ ಆತ ಹೇಳಿದ್ದ 'ಓಹ್, ಮಗಳೆ, ನೀನು

ಹುಡುಗನಾಗಬೇಕಿತ್ತು'.

ತಂದೆ ಕ್ಯಾಡಿಗೆ 'ಹೆಣ್ಣು ಮಕ್ಕಳು ಗಂಡು ಮಕ್ಕಳಷ್ಟು ಅಮೂಲ್ಯರಲ್ಲ'' ಎಂಬ ಅಭಿಪ್ರಾಯವಿದ್ದರೂ, ಆಗಿನ ಕಾಲದ ಬಹುಪಾಲು ತಂದೆಯರು ನೀಡದಿದ್ದ ಒಂದಿಷ್ಟು ಪ್ರೋತ್ಸಾಹವನ್ನು ಎಲಿಜಬೆತ್‌ಗೆ ನೀಡಿದ. ತನ್ನ ಕಾನೂನು ಕಛೇರಿಗೆ ಬರಲು ಬಿಡುತ್ತಿದ್ದ, ತನ್ನ ಕಕ್ಷಿದಾರರೊಡನೆ ಚರ್ಚಿಸುವಾಗ ಜೊತೆಗಿರಲು ಅನುಮತಿ ನೀಡಿದ್ದ. ಇಲ್ಲಿ ಎಲಿಜಬೆತ್‌ಗೆ ಹೆಣ್ಣಾದ ಕಾರಣಕ್ಕೆ ಎದುರಿಸಬೇಕಾದ ಅಸಮಾನ ಕಾನೂನುಗಳ ಪ್ರಥಮ ಪರಿಚಯವಾಯಿತು.

ಆಕೆಯ ತಂದೆಯ ಅನೇಕ ಕಕ್ಷಿದಾರರು ಮಹಿಳೆಯರಿದ್ದರು. ಅವರುಗಳ ಮುಖ್ಯ ಸಮಸ್ಯೆ ಎಂದರೆ, ಅಂದು ಜಾರಿಯಲ್ಲಿದ್ದ ಕಾನೂನು ಮದುವೆಯಾದೊಡನೆ ಹೆಣ್ಣಿನ ಆಸ್ತಿಯ ಹಕ್ಕನ್ನು, ಆಕೆ ಗಳಿಸಿದ ಆದಾಯದ ಹಕ್ಕನ್ನೂ ಕಿತ್ತುಕೊಳ್ಳುತ್ತಿತ್ತು. ಒಮ್ಮೆ ಹೆಣ್ಣು ವಿವಾಹವಾದಳು ಎಂದರೆ, ಆಕೆ ಪಿತ್ರಾರ್ಜಿತವಾಗಿ ಪಡೆದದ್ದಾಗಲಿ, ಸ್ವತಃ ದುಡಿದು ಗಳಿಸಿದ್ದ ಹಣವಾಗಲಿ, ಆಸ್ತಿಯಾಗಲಿ, ವೈಯಕ್ತಿಕ ವಸ್ತುಗಳೇ ಆಗಲಿ, ಎಲ್ಲವೂ ಗಂಡನ ಹಕ್ಕಿನದಾಗುತ್ತಿತ್ತು. ತಂದೆಯ ಕಛೇರಿಯಲ್ಲಿ ಕುಳಿತಂತೆ ಎಲಿಜಬೆತ್, ಗಂಡಂದಿರು ಹೆಂಡತಿಯ ಹಣವನ್ನು, ಬೇರೆ ಹೆಣ್ಣುಗಳ ಮೇಲೆ ಉಡಾಯಿಸುವ ಕತೆಗಳನ್ನು ಕೇಳಿದಳು, ಕುಡಿಯಲು, ಜೂಜಾಡಲು ಹೆಂಡತಿಯ ಹಣವನ್ನೆಲ್ಲ ಖರ್ಚು ಮಾಡಿದ ಘಟನೆಗಳನ್ನು ಕಂಡಳು. ಎಲಿಜಬೆತ್ ಕೆಟ್ಟ ಅನಿಷ್ಟ ಮದುವೆಯಲ್ಲಿ ಸಿಕ್ಕಿಕೊಂಡ ಮಹಿಳೆಯರು ಬಲು ಕಷ್ಟದಿಂದ ಬೇರ್ಪಟ್ಟದ್ದನ್ನು, ಕೆಲವರು ವಿಚ್ಛೇದನವನ್ನು ಪಡೆದದ್ದನ್ನೂ ನೋಡಿದಳು. ಆದರೆ ಈ ಮಹಿಳೆಯರಿಗೆ, ಅವರ ಮಕ್ಕಳನ್ನು ನೋಡುವ ಅನುಮತಿ ಕೂಡಾ ಇರಲಿಲ್ಲ. ಮಕ್ಕಳನ್ನು ಬೆಳೆಸುವಲ್ಲಿ ಅವರ ಯಾವ ಹಕ್ಕೂ ಇರಲಿಲ್ಲ. ರಾಜ್ಯದ ಕಾನೂನಿನ ಪ್ರಕಾರ ತಂದೆಗೆ ಮಕ್ಕಳ ಸಂಪೂರ್ಣ ಪಾಲಕ ಹಕ್ಕಿತ್ತು. ಅವನೆಂಥವನೇ ಆಗಿರಲಿ, ವಿಚ್ಛೇದನ, ಬೇರ್ಪಟ್ಟದ್ದಕ್ಕೆ ಕಾರಣವೇನೇ ಇರಲಿ, ಅವ ಕುಡುಕನಾಗಲಿ, ಕೆಡುಕನಾಗಲಿ, ಮಕ್ಕಳ ಪಾಲಕ ಹಕ್ಕುಗಳೆಲ್ಲಾ ಅವನದಾಗಿತ್ತು.

ಎಲಿಜಬೆತ್ ಹದಿನೈದನೇ ವರ್ಷದಲ್ಲಿ ಜಾನ್ಸ್‌ಟೌನ್ ಅಕಾಡೆಮಿಯಿಂದ ಪದವಿ ಪಡೆದಳು. ಆಕೆಯ ಜೊತೆಯ ಗಂಡು ಹುಡುಗರು, 'ಯೂನಿಯನ್ ಕಾಲೇಜ'ಗೆ ಹೋಗಲಿದ್ದರು. ಆದರೆ ಯೂನಿಯನ್ ಕಾಲೇಜಿಗೆ ಎಲಿಜಬೆತ್ ಹೋಗುವಂತಿರಲಿಲ್ಲ, ಕಾರಣ ಈಕೆ ಹುಡುಗಿ. ಎಲಿಜಬೆತ್ ಟ್ರಾಯ್ ಮಹಿಳೆಯರಿಗಿದ್ದ ಶಾಲೆ ಫೀಮೇಲ್ ಶಾಲೆ ಸೆಮಿನರಿ'ಗೆ ಸೇರಿದಳು. ಇಲ್ಲಿ ಸೆಮಿನರಿಯಲಿದ್ದ ಎರಡು ವರ್ಷ ಎಲಿಜಬೆತಗೆ ಕಿಂಚಿತ್ತೂ ಖುಷಿ ಇರಲಿಲ್ಲ. ಆಕೆಗೆ ಗೊತ್ತಿತ್ತು, ಒಂದಿಷ್ಟು ಫ್ರೆಂಚ್, ಸಂಗೀತ, ನೃತ್ಯ ಹೊಸತಾಗಿ ಇಲ್ಲಿ ಟ್ರಾಯ್‌ನಲ್ಲಿಯ ಧಾರ್ಮಿಕ ಚಟುವಟಿಕೆಗಳ ಬಿಸಿ ಎಲಿಜಬೆತಳನ್ನು ಬಲ್ಲು ಕದಡಿದವು, ಇದು ಧಾರ್ಮಿಕ ಪುನರುಜ್ಜೀವನದ ಸಮಯ. ಕ್ರಿಸ್ತ 1843ರಲ್ಲಿ ಎರಡನೇ ಬಾರಿಗೆ ಬರಲಿದ್ದಾನೆ ಎಂದು ಹೇಳಿ, ಕ್ರಿಸ್ತನ ಆಗಮನಕ್ಕೆ ಇನ್ನಿಲ್ಲದ ತಯಾರಿ ನಡೆಸಿದ ಗುಂಪುಗಳಿದ್ದವು. 'ಪಾಪಿಗಳು, ಪರಲೋಕದಲ್ಲಿ ಅವರಿಗೆ ಕಾದ ಶಿಕ್ಷೆ, ತಪ್ಪೊಪ್ಪಿಕೊಳ್ಳಲು ಕರೆ' - ಸುತ್ತಲಿನ ಇಂತಹ ವಾತಾವರಣ ಧಾರ್ಮಿಕ ಪ್ರಕ್ಷುಬ್ಧತೆಯಲ್ಲಿ ಮುಳುಗಿತ್ತು. ಏನೆಲ್ಲ ಗೊಂದಲ, ಅನುಮಾನ, ಸಂಶಯಗಳನ್ನು ಹುಟ್ಟಿಸಿದ ಚಳುವಳಿಗಳ ನಡುವೆ, ಪರಿಹಾರವಾಗಲಿ, ಕೊನೆಯಾಗಲಿ ಕಾಣದೆ ಎಲಿಜಬೆತ್ ಭಯದಿಂದ ನಡುಗಿದಳು. ಇಂತಹ ವಿಪರೀತದ ಪರಿಸರದಲ್ಲಿ ಮಾನಸಿಕ ಕ್ಷೋಭೆಗೊಳಗಾದ ಎಲಿಜಬೆತಳಿಗೆ ಒಂದಿಷ್ಟು ವಿಶ್ರಾಂತಿ ಸಿಗಲೆಂದು, ತಂದೆ ಆಕೆಯನ್ನು, ಆಕೆಯ ಅಕ್ಕ ಮತ್ತು ಭಾವನೊಡನೆ ನಯಗರಾಗೆ ಕರೆದೊಯ್ದರು. ಇಲ್ಲಿ ಬೆಳಕು ಕಂಡ ಹೊಸ ಉದಾರ ದೃಷ್ಟಿಯ ಕೃತಿಗಳು ಎಲಿಜಬೆತಳನ್ನು ಕಾಡಿದ ಧಾರ್ಮಿಕ ಕಂದಾಚಾರದಿಂದ ಮುಕ್ತಿಕೊಡಿಸಿ, ವೈಚಾರಿಕ ಹಾದಿಯತ್ತ, ವೈಜ್ಞಾನಿಕ ದಿಕ್ಕಿನತ್ತ ನಡೆಸಿದವು.

ಭಾವ ಎಡ್ವರ್ಡ್ ಬೇಯರ್ಡ್ ಮೆಲ್ಲನೆ ಎಲಿಜಬೆತಳ ಬದುಕನ್ನು ಪ್ರವೇಶಿಸಿದ, ಈತನೊಡನೆಯ ಚರ್ಚೆ, ವಿಚಾರ ವಿನಿಮಯ ಎಲಿಜಬೆತಳನ್ನು ವೈಚಾರಿಕವಾಗಿ ಬೆಳೆಸಿದವು. ಭಾವ ಎಡ್ವರ್ಡ್ ಬೇಯರ್ಡ್‌ಗೆ ಗಂಡೆಂಬ ಹಮ್ಮು ಮೇಲರಿಮೆಗಳಿರಲಿಲ್ಲ. ಈತ ಹುಡುಗಿಯರಿಗೆ ಸ್ಪಷ್ಟವಾಗಿ ಯೋಚಿಸುವುದನ್ನು, ತರ್ಕಬದ್ಧವಾಗಿ ಚಿಂತಿಸುವುದಕನ್ನು ಕಲಿಸುವಲ್ಲಿ ವಿಶೇಷ ಆಸಕ್ತಿ ವಹಿಸುತ್ತಿದ್ದ. ಈತ ಎಲಿಜಬೆತಳಿಗೆ ಕಲಿಕೆಯ ಹೊಸರಂಗಗಳನ್ನು ಪರಿಚಯಿಸಿದ. ತತ್ವಜ್ಞಾನ, ರಾಜಕೀಯ, ಅರ್ಥಶಾಸ್ತ್ರ ಚರಿತ್ರೆ, ಕಾವ್ಯ ಮುಂತಾದವುಗಳ ಪರಿಚಯ ಮಾಡಿದ್ದಲ್ಲದೆ, ಪ್ರತಿಯೊಂದನ್ನು ಸೂಕ್ಷ್ಮವಾಗಿ ಪರೀಕ್ಷಿಸುವುದನ್ನು, ಪ್ರಶ್ನಿಸುವುದನ್ನು ಕಲಿಸಿದ. ಈತ ಎಲಿಜಬೆತಳಿಗಿಂತ ಹತ್ತು ವರ್ಷಕ್ಕೆ ದೊಡ್ಡವನಿದ್ದ ಅವರಿಬ್ಬರ ನಡುವೆ ಪ್ರೀತಿಯ ಭಾವ ಮೊಳೆತಿತ್ತು.

ಅಕ್ಕ ತಂಗಿಯರನ್ನು ಕೂಡಿದ ಪ್ರೀತಿಯ ತ್ರಿಕೋಣ ಇಂದು ಕೂಡಾ ಅತಿ ನೋವಿನ ಕ್ಲಿಷ್ಟ ಘಟನೆಯಾಗಬಲ್ಲದು, ಇನ್ನು 1830ರಲ್ಲಂತೂ ಇಂತಹ ಸಾಧ್ಯತೆ ಪ್ರಳಯ ಸಮಾನವಾಗಿತ್ತು. ಎಡ್ವರ್ಡ್ ಎಲಿಜಬೆತಳನ್ನು ತನ್ನೊಡನೆ ಓಡಿ ಹೋಗುವಂತೆ ಆಹ್ವಾನಿಸಿದ. ಎಲಿಜಬೆತ್ ನಿರಾಕರಿಸಿದಳು. ತನ್ನ ಅಕ್ಕನ ಬದುಕಿನ ಮೇಲೆ ಇಂತಹ ಕೃತ್ಯದ ಪರಿಣಾಮವನ್ನು ಆಕೆ ಊಹಿಸಬಲ್ಲವಳಿದ್ದಳು.

ಪ್ರತಿ ವರ್ಷ ಎಲಿಜಬೆತ್ ಕಸಿನ್ ಗೆರಿಟ್ ಸ್ಮಿತ್ ಅವರ ಮನೆಗೆ ಭೇಟಿ ನೀಡುತ್ತಿದ್ದಳು. ಈ ಭೇಟಿಗಳು ಆಕೆಗೆ ದಿಟವಾದ ಶಿಕ್ಷಣವನ್ನು ನೀಡಿದವು. ಗೆರಿಟ್ ಸ್ಮಿತ್ ಆ ಕಾಲದ ಅತ್ಯಂತ ಕ್ರಿಯಾಶೀಲ ಸುಧಾರಕರಲ್ಲಿ ಒಬ್ಬ. ಈತ ಗುಲಾಮಿ ಪದ್ಧತಿಯನ್ನು ನಿರ್ಮೂಲನ ಮಾಡುವ ಚಳುವಳಿಗೆ ಉದಾರವಾಗಿ ಹಣ ನೀಡುತ್ತಿದ್ದ. ತನ್ನ ಸಮಯ ಮತ್ತು ಬರವಣಿಗೆಯನ್ನು ಗುಲಾಮಿ ಪದ್ಧತಿಯ ನಿರ್ಮೂಲನಕ್ಕೆ ಬಳಸಿದ. ಆ ಕಾಲದ ಉಳಿದ ಸುಧಾರಣೆಗಳಾದ ಮಿತಾಚಾರ, ಮದ್ಯವರ್ಜನೆ, ಉದಾರೀಕೃತ ಧರ್ಮ ಮತ್ತು ಮಹಿಳಾ ಹಕ್ಕುಗಳಿಗೂ ಈತನ ಬೆಂಬಲವಿತ್ತು. ಕ್ಯಾಡಿ, ಗೆರಿಟ್ ಸ್ಮಿತ್ ಅವರ ತೀವ್ರಗಾಮಿ ವಿಚಾರಗಳನ್ನು ಒಪ್ಪುತ್ತಿರಲಿಲ್ಲ. ಆದರೆ ಎಲಿಜಬೆತಳಿಗೆ ಈ ಭೇಟಿಗಳು ಅಮೂಲ್ಯ ಅನುಭವಗಳಾದವು.

ಎಲಿಜಬೆತಳಿಗೆ ಅಂದಿನ ಪ್ರಮುಖ ಸುಧಾರಣೆಗಳು, ಮತ್ತು ಸುಧಾರಕರ ಅತಿ ನಿಕಟ ಪರಿಚಯವಾಯಿತು. ಈಕೆ ಗುಲಾಮಿ ಪದ್ಧತಿಯ ನಿರ್ಮೂಲನದಂತಹ ಸ್ಫೋಟಕ ವಿಷಯಗಳನ್ನು ಚರ್ಚಿಸುವ ಚರ್ಚಾಕೂಟಗಳಲ್ಲಿ ಉಪಸ್ಥಿತಳಿದ್ದಳು. ಇಂತಹ ವಿಷಯಗಳ ಬಗ್ಗೆ ತನ್ನದೇ ಮನೆಯಲ್ಲಿ ಉಸಿರೆತ್ತುವಂತಿರಲಿಲ್ಲ. ಬಾಲ್ಯದಿಂದಲೂ ಕಾಡಿದ್ದ ಧಾರ್ಮಿಕ ಅಂಧಕಾರ, ಭೀತಿ, ವಿಷಣ್ಣತೆಯ ಭಾವಗಳು ಮರೆಯಾಗಿ, ಸಂತಸ, ಪ್ರೀತಿ, ಶಾಂತಿ ಮತ್ತು ಸಮಾಧಾನಗಳ ಈ ಲವಲವಿಕೆಯ ವಾತಾವರಣದಲ್ಲಿ ಎಲಿಜಬೆತಳ ಸಹಜ ಉತ್ಸಾಹ ಉಕ್ಕಿ ಹರಿಯಿತು.

1839ರಲ್ಲಿ ಇಂತಹ ಒಂದು ಭೆಟ್ಟಿಯ ಸಮಯದಲ್ಲಿ ಎಲಿಜಬೆತ್ ಹೆನ್ರಿ ಸ್ಟೇಟನ್ ಅವರನ್ನು ಭೇಟಿಯಾದಳು. ಈತ ಗುಲಾಮಿ ಪದ್ಧತಿಯ ವಿರುದ್ಧದ ಸಮಾವೇಶಗಳಲ್ಲಿ ಭಾಗವಹಿಸುತ್ತಿದ್ದ. ಈ ಚಳುವಳಿಯ ಅತ್ಯಂತ ಸಮರ್ಥ ಮತ್ತು ದಿಟ್ಟಮುಂದಾಳುವಾಗಿದ್ದ. ಎಲಿಜಬೆತ್ ಈಗ ಇಪ್ಪತ್ತುನಾಲ್ಕು ವರ್ಷದ ಯುವತಿ. ಎಲಿಜಬೆತಳ ಜೀವನದಲ್ಲಿ ಎಡ್ವರ್ಡ್ ಬೇಯರ್ಡ್ ಜಾಗವನ್ನು ಹೆನ್ರಿ ಸ್ಟೇಟನ್ ಆವರಿಸಿದ. ಸ್ವಲ್ಪವೇ ಸಮಯದಲ್ಲಿ ಆತ ಎಲಿಜಬೆತಳನ್ನು ವಿವಾಹವಾಗುವಂತೆ ಕೇಳಿದ. ಆದರೆ ಪ್ರತಿಯೊಬ್ಬರೂ ಈ ವಿವಾಹದ ವಿರುದ್ಧವಿದ್ದರು. ಸಂಪ್ರದಾಯವಾದಿಯಾದ ತಂದೆ ಗುಲಾಮಿ ಪದ್ಧತಿಯ ನಿರ್ಮೂಲನವನ್ನು ವಿರೋಧಿಸುತ್ತಿದ್ದರು. ಎಲಿಜಬೆತಗೆ ತಾನು ಇತರರ ಅಭಿಪ್ರಾಯಕ್ಕೆ ಮಣಿದದ್ದು ಸಾಕೆನಿಸಿತು. ನಿರ್ಧಾರ ತೆಗೆದುಕೊಂಡಳು, ವಿವಾಹಕ್ಕೆ ಸಮ್ಮತಿಸಿದಳು. ತಂದೆ ಮನಸ್ಸಿಲ್ಲದ ಮನಸ್ಸಿನಲ್ಲಿಯೇ ಒಪ್ಪಿಗೆ ನೀಡಬೇಕಾಯಿತು. ಈಗ ಇದ್ದ ಒಂದೇ ಒಂದು ಕಷ್ಟವೆಂದರೆ ಸಾಂಪ್ರದಾಯಿಕ ಪಾದ್ರಿಗೆ ವಿವಾಹದ ವಿಧಿಗಳಲ್ಲಿ 'ವಿಧೇಯಳಾಗಿರು' ಎಂಬ ಪದವನ್ನು ತೆಗೆದು ಹಾಕುವಂತೆ ಮನವೊಲಿಸಬೇಕಿತ್ತು. ಎಲಿಜಬೆತ್ ತನ್ನ ವಿವಾಹ ಸಮಾನರ ನಡುವಿನ ವಿವಾಹ, 'ವಿಧೇಯಳಾಗಿರು' ಎಂಬುದನ್ನು ತಾನು ಒಪ್ಪುವುದಿಲ್ಲ, ಎಂದು ಪಟ್ಟು ಹಿಡಿದಳು. ಕಡೆಗೂ ಪಾದ್ರಿ ಎಲಿಜಬೆತ್‌ಳ 'ಹಟ'ಕ್ಕೆ ಮಣಿಯಬೇಕಾಯಿತು.

1840ರಲ್ಲಿ ಈಕೆಯ ವಿವಾಹವಾಯಿತು. ಎಲಿಜಬೆತ್ ತನ್ನನ್ನು 'ಶ್ರೀಮತಿ ಹೆನ್ರಿ ಸ್ಟೇಟನ್' ಎಂದು ಕರೆಯುವುದನ್ನೂ ತೀವ್ರವಾಗಿ ವಿರೋಧಿಸಿದಳು. 'ಗುಲಾಮರಿಗೆ ತಮ್ಮದಾದ ಹೆಸರಿರುವುದಿಲ್ಲ, ಹೆಂಗಸರೂ ಕೂಡಾ ಗಂಡಸರ ಚರಾಸ್ತಿಯಂತೆ, ಅವರಿಗೆ ತಮ್ಮದೇ ಆದ ಗುರುತಾಗಲಿ, ಕಾನೂನು ಮತ್ತು ಸಾಮಾಜಿಕ ಹಕ್ಕುಗಳಾಗಲಿ ಇಲ್ಲವೆಂದು ತೋರಿಸುವ ಪ್ರತೀಕ ಈ ರೀತಿ ಗಂಡನ ಹೆಸರಿಡಿದು ಹೆಣ್ಣನ್ನು ಕರೆಯುವುದು' ಎಂದು ಆಕೆ ವಾದಿಸಿದಳು. 'ಹೆಂಗಸರನ್ನು 'ಶ್ರೀಮತಿ ಜಾನ್' ಮುಂತಾಗಿ ಕರೆಯುವ ಪದ್ಧತಿ ಬಿಳಿಯ ಗಂಡಸರು ಎಲ್ಲದರ ಯಜಮಾನರು ತಾವೆಂದು ಸಾರುವ ಸಿದ್ಧಾಂತದ ಮೇಲೆ ಬೇರೂರಿದೆ. ಇಂತಹ ವಿಚಾರಗಳು ನ್ಯಾಯಬದ್ಧವೆಂದು ನಾ ಒಪ್ಪಲಾರೆ. ಇನ್ನೊಬ್ಬರ ಹೆಸರನ್ನು ನಾನು ಇಟ್ಟುಕೊಳ್ಳಲಾರೆ' ಎಂದು ದೃಢವಾಗಿ ವಾದಿಸಿದಳು. ಇವು ಆ ಕಾಲಕ್ಕಿರಲಿ, ಹೆಚ್ಚೇನೂ ಬದಲಾಗಿರದ ಈ ಕಾಲಕ್ಕೂ ಕ್ರಾಂತಿಕಾರಿ ವಿಚಾರಗಳು. ಕಡೆಗೆ ಎಲಿಜಬೆತ್ ಒಂದಿಷ್ಟು ರಾಜಿ ಮಾಡಿಕೊಂಡು, ಹೆನ್ರಿ ಹೆಸರನ್ನು ಅಂಟಿಸಿಕೊಳ್ಳದೆ, ತನ್ನ ಎಲಿಜಬೆತ್ ಹೆಸರನ್ನು, ಉಳಿಸಿಕೊಂಡು ಎಲಿಜಬೆತ್ ಸ್ಟೇಟನ್ ಆದಳು. ಎಲಿಜಬೆತ್ ಪತಿಯೊಡನೆ ಲಂಡನಿನಲ್ಲಿ ನಡೆದ 'ಆಂಟಿ ಸ್ಲೇವರಿ' ವಿಶ್ವ ಸಮ್ಮೇಳನದಲ್ಲಿ ಭಾಗವಹಿಸಿದಳು. ಅಮೆರಿಕೆಗೆ ಹಿಂತಿರುಗಿದ ಮೇಲೆ ಎಲಿಜಬೆತ್ ಸುಧಾರಣ ಚಳುವಳಿಗಳಲ್ಲಿ, ಯುದ್ಧ ವಿರೋಧಿ ಪ್ರಚಾರದಲ್ಲಿ, ಗುಲಾಮಿ ಪದ್ಧತಿಯ ನಿರ್ಮೂಲನೆಯಲ್ಲಿ ಪತಿಯೊಡನೆ ಮುಂದಾಳತ್ವ ವಹಿಸಿದಳು. ಇದೀಗ ಇವರು ಬಾಸ್ಟನ್‌ನಲ್ಲಿದ್ದರು. ಇವರಿಗೆ ಮೂವರು ಗಂಡು ಮಕ್ಕಳು ಹುಟ್ಟಿದರು. ನೆಮ್ಮದಿಯ ಮನೆ, ಒಳ್ಳೆಯ ನೌಕರರು, ಗೃಹಜೀವನ ಸುಸೂತ್ರವಾಗಿ ನಡೆದಿತ್ತು. ಆದರೆ 1847ರಲ್ಲಿ ಹೆನ್ರಿ ಸ್ಟೇಟನ್ ಮತ್ತು ಎಲಿಜಬೆತ್ 'ಸೆನೆಕಾಫಾಲ್ಸ್‌ಗೆ ಬಂದು ನೆಲೆಸಬೇಕಾಯಿತು.

ಬಾಸ್ಟನ್‌ನಲ್ಲಿ ಎಲಿಜಬೆತ್ ಬದುಕು ಅತ್ಯಂತ ಚಟುವಟಿಕೆಯಿಂದ ಕೂಡಿತ್ತು. ಇಲ್ಲಿ ತಟ್ಟನೆ ಎಲಿಜಬೆತ್ ಸಾಮಾನ್ಯ ಗೃಹಿಣಿಯ ಸಾಧಾರಣ ಬದುಕು ನಡೆಸುವಂತಾಯಿತು. ಒಳ್ಳೆಯ ನೌಕರರು ದೊರೆಯುವುದು ಕಷ್ಟವಿತ್ತು, ಮನೆ ನಡೆಸುವುದೇ ದೊಡ್ಡ ಕೆಲಸವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಎಲಿಜಬೆತ್ ಬಾಸ್ಟನ್‌ನ ಬೌದ್ಧಿಕ ಚಟುವಟಿಕೆಯನ್ನು, ಜೊತೆಯ ಸಂಗಾತಿಗಳನ್ನು ಕಳಕೊಂಡಿದ್ದಳು. ಪತಿ ಬಹಳಷ್ಟು ಬಾರಿ ಕೆಲಸದ ಮೇಲೆ ಹೊರಗಿರುತ್ತಿದ್ದ. ಎಲಿಜಬೆತ್ ಮಕ್ಕಳೊಡನೆ ಏಕಾಂಗಿ. ಈಕೆಯ ಬದುಕು ಗೃಹಿಣಿಯ ಬದುಕಿನ ಕಿರಿದಾದ ಮಿತಿಯಲ್ಲಿ ಸಿಕ್ಕಿ ಬಿದ್ದಿತು. ಸೆನೆಕಾ ಫಾಲ್ಸ್, 1848, ಐವರು ಮಹಿಳೆಯರು ಟೀ ಪಾರ್ಟಿಗೆಂದು ಸೇರಿದ್ದರು. ಲುಕ್ರೆಷಿಯಾ ಮಟ್, ಮಾರ್ತಾ ರೈಟ್, ಜೇನ್ ಹಂಟ್, ಮೇರಿ ಆನ್ ಮ್ಯಾಕ್ಲಿಂಟಾಕ್, ಹಾಗೂ ಎಲಿಜಬೆತ್ ಕ್ಯಾಡಿ ಸ್ಟೇಟನ್. ತಟ್ಟನೆ ಎಲಿಜಬೆತ್ ಕೇವಲ ಹೆಂಡತಿ, ತಾಯಿ, ಮನೆಯ ಮೇಲ್ವಿಚಾರಕಿಯಾಗಿ ಉಳಿದ ಮಹಿಳೆಯ ಪಾತ್ರದ ಬಗೆಗೆ ಅತೃಪ್ತಿಯನ್ನು ತೋಡಿಕೊಳ್ಳ ತೊಡಗಿದಳು. ಇಲ್ಲಿ ಎಲಿಜಬೆತ್, ತಾನು ಹಿಂದೆ ಲಂಡನ್ನಿನಲ್ಲಿ ಭೇಟಿಯಾಗಿದ್ದ ಲುಕ್ರೆಷಿಯಾ ಮಟಳನ್ನು ಕಾಣಲು ಬಂದಿದ್ದಳು. ತನ್ನ ಬದುಕಿನ ಮಿತಿಗಳು ಈಕೆಯನ್ನು ತೀವ್ರವಾಗಿ ಕಾಡಿ, ಎಲಿಜಬೆತ್ ಆವೇಶದಿಂದ, ಕ್ರೋಧದಿಂದ ಉತ್ಕಟವಾಗಿ ತನ್ನ ಅತೃಪ್ತಿಗಳನ್ನು ತೋಡಿಕೊಂಡಳು. ತಾನು 'ಇದರ ಬಗ್ಗೆ ಏನಾದರೂ ಮಾಡಬೇಕೆಂದು' ಆಕೆಗೆ ಅನಿಸಿತು. ಆಕೆಯ ಭಾವಾವೇಶ ಪಾರ್ಟಿಯಲ್ಲಿದ್ದವರನ್ನು, 'ಏನನ್ನಾದರೂ ಮಾಡುವಂತೆ' ಪ್ರೇರೇಪಿಸಿತು. ಒಟ್ಟಿಗೆ ಕೂಡಿದ ಇವರು ಮಾಡಲು ಹೊರಟದ್ದು, ಆ ಕಾಲಕ್ಕೆ ಅತ್ಯಂತ ದಿಟ್ಟತನದ ಕೆಲಸ. ಒಂದು 'ಮಹಿಳಾ ಹಕ್ಕುಗಳ ಸಮಾವೇಶ'ವನ್ನು ಕರೆಯಲು ಅಂದು ಎಲ್ಲಿಲ್ಲದ ಧೈರ್ಯ ಬೇಕಿತ್ತು. ಎಂಟು ವರ್ಷಗಳ ಹಿಂದೆ ಲಂಡನಿನಲ್ಲಿ ಭೇಟಿಯಾದಾಗ ಇಂತಹದೊಂದು ಸಮ್ಮೇಳನದ ವಿಚಾರ, ಎಲಿಜಬೆತ್ ಮತ್ತು ಮಟ್ ಇಬ್ಬರ ಮನಸ್ಸಿಗೂ ಬಂದಿತ್ತು. ಇದೀಗ ಈ ಐವರು ಮಹಿಳೆಯರು ಕಾರ್ಯೋನ್ಮುಖರಾದರು. ಜೊತೆಯಲ್ಲಿ ಕುಳಿತು ಒಂದು 'ಪ್ರಕಟಣೆ'ಯನ್ನು ಬರೆದರು. ಮರುದಿನ ಜುಲೈ 14, 1848ರ 'ಸೆನಕಾ ಕೌಂಟಿ ಕೊರೆಯರ್' ಪತ್ರಿಕೆಯಲ್ಲಿ ಅದು

ಪ್ರಕಟವಾಯಿತು. ಸಾಮಾಜಿಕವಾಗಿ, ಧಾರ್ಮಿಕವಾಗಿ, ಪ್ರಜೆಯಾಗಿ ಮಹಿಳೆಯರ ಪರಿಸ್ಥಿತಿಯನ್ನು, ಹಕ್ಕುಗಳನ್ನು ಚರ್ಚಿಸಲು 'ಮಹಿಳಾ ಹಕ್ಕುಗಳ ಸಮಾವೇಶ'ಕ್ಕೆ ಮಹಿಳೆಯರನ್ನು ಆಹ್ವಾನಿಸಿದ್ದರು. ಮತ್ತೈದೇ ದಿನಕ್ಕೆ ಸೆನೆಕಾ ಫಾಲ್ಸ್‌ನ 'ವೆಸ್ಲಿಯನ್ ಚಾಪೆಲ್'ನಲ್ಲಿ ಜುಲೈ 19 ಮತ್ತು 20 ರಂದು ಈ ಸಮಾವೇಶ ನಡೆಯಲಿತ್ತು. ಅವರಿಗೂ ಇಂತಹ ಒಂದು ಸಮಾವೇಶವನ್ನು ಹೇಗೆ ವ್ಯವಸ್ಥೆ ಮಾಡಬೇಕೆಂದು ತಿಳಿದಿರಲಿಲ್ಲ. ಇದರ ಪರಿಣಾಮ ಏನಾಗಬಹುದೂ ಎಂದೂ ಗೊತ್ತಿರಲಿಲ್ಲ. ಈ ನೆಲದ ಚರಿತ್ರೆಯಲ್ಲಿ ಮೊಟ್ಟಮೊದಲಿಗೆ ಮಹಿಳೆಯರು ಈ ರೀತಿ ಮಾಡ ಹೊರಟಿದ್ದರು.

ಹೀಗಿದ್ದರೂ, ಅನಿರೀಕ್ಷಿತವಾಗಿ ಉದ್ಭವಿಸಿದ ಈ ಆರಂಭದಲ್ಲಿ ಮಹಿಳಾ ಹಕ್ಕು ಮತ್ತು ಮತದಾನ ಹಕ್ಕಿನ ಕ್ರಿಯಾತ್ಮಕ ಚಳುವಳಿ ಅಮೆರಿಕದಲ್ಲಿ ಉದಯಿಸಲಿತ್ತು. ಜಗತ್ತಿನ ಅನೇಕ ಭಾಗಗಳಲ್ಲಿ ಇಂತಹ ಚಳುವಳಿಗೆ ಸ್ಫೂರ್ತಿಯಾಗಲಿತ್ತು. ಒಂದು ಬಗೆಯಲ್ಲಿ ಈ ಇಡೀ ಸಮಾವೇಶ, ಮಹಿಳಾ ಬದುಕಿನ ಸೀಮಿತತೆಯ ಬಗ್ಗೆ ಎಲಿಜಬೆತ್‌ಗೆ ಇದ್ದ ತೀವ್ರ ನಿರಾಶೆ ಮತ್ತು ಅಸಮಾಧಾನದಿಂದ ಹಠಾತ್ತನೆ ಉದ್ಭವಿಸಿತ್ತು. ಅದು ಕೇವಲ ಆಕೆಯ ವೈಯಕ್ತಿಕ ಬದುಕಿನ ಅತೃಪ್ತಿಯಷ್ಟೇ ಆಗಿರಲಿಲ್ಲ, ತಮ್ಮ ಬದುಕಿನ ಸೀಮಿತತೆಯಿಂದ ಬೇಸತ್ತು ವ್ಯಾಕುಲಗೊಂಡು ದಣಿದ, ಉತ್ಸಾಹಗುಂದಿದ ಬಹಳಷ್ಟು ಮಹಿಳೆಯರ ಬದುಕಿನ ಭಾವವಾಗಿತ್ತು. ಇವೆಲ್ಲವೂ ಎಲಿಜಬೆತಗೆ 'ಮಹಿಳಾ ಹಕ್ಕು'ಗಳತ್ತ ಹೆಜ್ಜೆ ಇಡುವಂತೆ ಪ್ರೇರೇಪಿಸಿದ್ದವು. ಮೇಲ್ನೋಟಕ್ಕೆ ಸರಳವಾಗಿ ಕಂಡ ಮಹಿಳೆಯರ ಸಮಸ್ಯೆಗಳು ಸಂಕೀರ್ಣವಿದ್ದವು. ಸಾಮಾಜಿಕ ಸಮಾನತೆ, ರಾಜಕೀಯ ಹಕ್ಕುಗಳು, ಕಾನೂನುಗಳ ಪರಿವರ್ತನೆ ಅಷ್ಟೇ ಅಲ್ಲ ಮಹಿಳೆಯರ ಮೇಲಿನ ಸೂಕ್ಷ್ಮ ಮಾನಸಿಕ ಒತ್ತಡಗಳು, ಈ ಎಲ್ಲವನ್ನೂ ಚಳವಳಿ ಒಳಗೊಳ್ಳಲಿತ್ತು. ಮಹಿಳೆಯ ನಿಜವಾದ ಸಮಸ್ಯೆಗಳನ್ನು ಸ್ಪಷ್ಟ ಪಡಿಸುವುದು, ಅದಕ್ಕೆ ಪರಿಹಾರ ಕಂಡುಕೊಳ್ಳುವಷ್ಟೇ ಕ್ಲಿಷ್ಟವಿತ್ತು. 'ಅಲ್ಲ ಮಹಿಳೆಯರಿಗೆ ಇರುವ ಕಷ್ಟವಾದರೂ ಏನು, ಮಹಿಳೆಯರಿಗೆ ಬೇಕಾದದ್ದಾದರೂ ಏನು?' ಎಂಬುದು ಎಲ್ಲರ ಪ್ರಶ್ನೆ.

ಪುರುಷರು ನಿರ್ಧರಿಸಿ ವಿಧಿಸಿದ ಕಾನೂನುಗಳಿಂದ ಮಹಿಳೆಯ ಬದುಕು ನಿರ್ದೇಶಿಸಲ್ಪಡುವುದು ಬೇಕಿರಲಿಲ್ಲ. ಆಕೆಗೆ ಪುರುಷರು ಬರೆದಿಟ್ಟ ನಿಗದಿತ ಪಾತ್ರದಲ್ಲಿ ನಟಿಸುವುದು ಬೇಕಿರಲಿಲ್ಲ. ಅದೆಷ್ಟು ದೀರ್ಘ ಕಾಲದಿಂದ ಮಹಿಳೆಯರನ್ನು ದೌರ್ಬಲ್ಯದಲ್ಲಿ ನಿರ್ಬಂಧನದಲ್ಲಿಡಲಾಗಿದೆ ಎಂದರೆ, ಇಂದು ಆಕೆಯ ಬುದ್ಧಿ, ಮನಸ್ಸುಗಳೆರಡಕ್ಕೂ ಲಕ್ವಾ ಬಡಿದಿದೆ. ಮಹಿಳೆಗೆ ಸಮಾಜದಲ್ಲಿ ಮೊದಲು ಸಮಾನ ಹಕ್ಕುಗಳು, ಸಮಾನ ಮನ್ನಣೆ ಬೇಕಿದೆ. ಆಕೆಯ ವಿಕಾಸಕ್ಕೆ ಸಮಾನ ಅವಕಾಶಗಳು ದೊರೆಯಲಿ. ಆಕೆ ತನ್ನನ್ನು ಕಟ್ಟಿಟ್ಟ ಶತಶತಮಾನಗಳ ಅಂಧಕಾರದಿಂದ ಹೊರಬರುವಂತಾಗಲಿ, ತನ್ನ ಮೇಲಿನ ಒತ್ತಡದಿಂದ ಮುದುಡಿಕೊಂಡ ರೆಕ್ಕೆ ಬಿಚ್ಚಿ ಹಾರುವಂತಾಗಲಿ. ಮಹಿಳೆಯರು ಅನುಗ್ರಹವನ್ನು ಬೇಡುವುದಲ್ಲ, ಹಕ್ಕುಗಳನ್ನು ಕೇಳಲಿ. ನಮ್ಮ ಎಲ್ಲ ಬಗೆಯ ಸಾಮರ್ಥ್ಯಕ್ಕೆ ಅವಕಾಶಗಳು ಸಿಗಲಿ, ಪ್ರೋತ್ಸಾಹ ದೊರೆಯಲಿ. ಜುಲೈ 19, 1848, ಮಹಿಳಾ ಹೋರಾಟದ ಚರಿತ್ರೆಯಲ್ಲಿ ಬರೆದಿಟ್ಟ ಸ್ವರ್ಣದಿನವಾಯಿತು. ಈ ಸಮಾವೇಶ ಅಮೆರಿಕದ ಮಹಿಳಾ ಹಕ್ಕುಗಳ ಚಳುವಳಿಯ ಆರಂಭವಾಗಿತ್ತು. ಈ ಚಳುವಳಿಯ ಮುಂದಾಳಾಗಿ, ಎಲಿಜಬೆತ್ ಮಹಿಳಾ ಹಕ್ಕುಗಳ ಬಗ್ಗೆ ತೀವ್ರವಾಗಿ ವ್ಯಾಪಕವಾಗಿ ಬರೆಯುತೊಡಗಿದಳು. 1951ರಲ್ಲಿ ಎಲಿಜಬೆತ್, ಸುಸಾನ್ ಬಿ. ಆಂತೊನಿ ಎಂಬಾಕೆಯನ್ನು ಭೇಟಿಯಾದಳು. ಈ ಇಬ್ಬರು ಮಹಿಳೆಯರ ಆಕಸ್ಮಿಕ ಭೇಟಿ ಮಹಿಳಾ ಚಳುವಳಿಯ ದಿಕ್ಕನ್ನೇ ಬದಲಿಸಿತು, ಮಹಿಳೆಯರ ಮತ ಚಲಾಯಿಸುವ ಹಕ್ಕಿಗಳಾಗಿ 72 ವರ್ಷಗಳ ಹೋರಾಟಕ್ಕೆ ಕಾರಣವಾಯಿತು.

ಎಲಿಜಬೆತ್ ಸಾರ್ವಜನಿಕ ಸಮ್ಮೇಳನಗಳಲ್ಲಿ ಮಾತನಾಡುವುದು ಆಕೆಯ ತಂದೆಗೆ ಇಷ್ಟವಿರಲಿಲ್ಲ. 1954ರಲ್ಲಿ ಎಲಿಜಬೆತ್ ನ್ಯೂಯಾರ್ಕ್ ಶಾಸನಸಭೆಯ ಎದುರಿಗೆ ಮೊತ್ತ ಮೊದಲ ಬಾರಿಗೆ, ಮಹಿಳೆಯರ ಮತದಾನದ ಹಕ್ಕನ್ನು ಕೇಳಿ, ವಿವಾಹಿತ ಮಹಿಳೆಯರ ಆಸ್ತಿ ಹಕ್ಕನ್ನು ಕೇಳಿ ಮಾತನಾಡಿದಳು. ಈ ಭಾಷಣದ ನಂತರ ಆಕೆಯನ್ನು ಬೃಹತ್ ಪ್ರೇಕ್ಷಕ ವೃಂದದ ಎದುರು ಮಾತನಾಡುವಂತೆ ಆಹ್ವಾನಿಸಲಾಯಿತು. 'ನೀನೇನಾದರೂ ಈ ಭಾಷಣ ಮಾಡಲು ಹೋದರೆ, ನನ್ನ ವಿಲ್‌ನಿಂದ ನನ್ನ ಹೆಸರನ್ನು ಕಿತ್ತು ಹಾಕುತ್ತೇನೆ. ಈ ಭಾಷಣ ನಿನಗೆ ತುಂಬಾ ದುಬಾರಿಯಾಗಲಿದೆ' ಎಂದು ತಂದೆ ಬೆದರಿಕೆ ಹಾಕಿದ. ಎಲಿಜಬೆತ್ ಬಹಳಷ್ಟು ಸಮಯ ಮನೆಯಿಂದ ಹೊರಗೆ ಕಳೆಯುತ್ತಿದ್ದಾಳೆಂದು ಪತಿಯ ದೂರು ಹೆಚ್ಚಿತ್ತು. ಆತ ಮಹಿಳಾ ಹಕ್ಕುಗಳ ಪರವಿದ್ದರೂ, ಮನೆಯಲ್ಲಿ ಹೆಂಡತಿಯ ಅನುಪಸ್ಥಿತಿ ಆತನಿಗೆ ಹಿತವಿರಲಿಲ್ಲ. ಇವು ಎಲಿಜಬೆತ್‌ಗೆ ಅತ್ಯಂತ ಕಷ್ಟದ ವರ್ಷಗಳಾಗಿದ್ದವು.

1862ರಲ್ಲಿ ಎಲಿಜಬೆತ್ ಕುಟುಂಬ ನ್ಯೂಯಾರ್ಕ್ ಸಿಟಿಗೆ ಬಂದಿತು. ಇಲ್ಲಿಯೂ ಎಲಿಜಬೆತ್ ಮಹಿಳಾ ಹಕ್ಕುಗಳ ತನ್ನ ಕೆಲಸವನ್ನು ಮುಂದುವರೆಸಿದಳು. ಈಕೆ ಚಳುವಳಿಯು ಮತ್ತಷ್ಟು ವ್ಯಾಪಕವಾಗಬೇಕೆಂದು ಬಯಸಿದಳು. ಮಹಿಳೆಯರ ಮತದಾನದ ಹಕ್ಕು, ಹೆಣ್ಣು ಮಕ್ಕಳ ಉಡುಪಿನಲ್ಲಿ ಸುಧಾರಣೆ, ಮಹಿಳೆಯರ ಕ್ರೀಡೆಗಳು, ಸಮಾನ ಉದ್ಯೋಗ, ಆಸ್ತಿ ಹಕ್ಕು, ಸಮಾನ ವೇತನ, ವಿಚ್ಛೇದನದ ಹಕ್ಕು, ಮಕ್ಕಳ ಪಾಲಕ ಹಕ್ಕು, ಸಹ ಶಿಕ್ಷಣ, ಗರ್ಭ ನಿಯಂತ್ರಣ, ಧಾರ್ಮಿಕ ಸುಧಾರಣೆ ಎಲ್ಲವನ್ನೂ ಚಳುವಳಿ ಒಳಗೊಂಡಿತ್ತು. ತನ್ನ ಬದುಕಿನ ಕೊನೆಯವರೆಗೂ ಎಲಿಜಬೆತ್ ಮಹಿಳಾ ಹಕ್ಕುಗಳ ಬಗ್ಗೆ ದುಡಿದಳು, ಬರೆದಳು, ಪ್ರವಾಸ ಮಾಡಿ ಮಹಿಳಾ ವಿಷಯಗಳನ್ನು ಕುರಿತು ಮಾತನಾಡಿದಳು. 1902ರಲ್ಲಿ ತನ್ನ 87ನೇ ವಯಸ್ಸಿನಲ್ಲಿ ಎಲಿಜಬೆತ್ ತೀರಿಕೊಂಡಾಗ, ತಾನು ಹುಟ್ಟುಹಾಕಿದ ಚಳುವಳಿ ವ್ಯಾಪಕವಾಗಿ ಹಿಗ್ಗಿದ್ದನ್ನು ಕಂಡಿದ್ದಳು, ಹೋರಾಟದ ಫಲವನ್ನು ಮಹಿಳೆಯರು ಸವಿಯುವುದನ್ನು ಕಂಡಿದ್ದಳು. ಆದರೆ ಮಹಿಳೆಯರ ಸಮಾನತೆಯ ಹಾದಿಯ ಪಯಣ ಇನ್ನೂ ಬಲು ದೀರ್ಘವಿತ್ತು. ಮಹಿಳೆಯರು ಮತಚಾಲನೆಯ ಹಕ್ಕನ್ನು ಪಡೆಯಲು ಇನ್ನೂ 18 ವರ್ಷಗಳ ಕಾಲ ಕಾಯಬೇಕಿತ್ತು.

★ ★ ★

ಬೇಸಾಯಗಾರ್ತಿ ಇಂದು

ಹೆಣ್ಣನ್ನು ಕೃಷಿದೇವತೆಯೆನ್ನುವುದು ವಾಡಿಕೆ. ನಾಗರೀಕತೆಯ ಆರಂಭದಲ್ಲಿ ಗಂಡು ಬೇಟೆಯಾಡಲು ಹೊರಗೆ ಹೊರಟಾಗ ಮನೆಯ ಅಂಗಳದಲ್ಲಿ ಬೀಜ ನೆಟ್ಟು, ಸಸಿ ಬೆಳೆಸಿ ಕೃಷಿಗೆ ಕಾರಣಳಾದವಳು, ಅದರ ಸಂಶೋಧಕಳು ಹೆಣ್ಣು. ಆದರೆ ನಾಗರೀಕತೆ ಬೆಳೆದಂತೆ ಕೃಷಿಯ ಉತ್ಪಾದನಾ ವಿಧಾನಗಳು ನೈಪುಣ್ಯತೆ ಸಾಧಿಸತೊಡಗಿದಂತೆ ಗಂಡು ಈ ರಂಗ ಪ್ರವೇಶಿಸಿ ಅದರ ಸ್ವಾಮ್ಯವನ್ನು ತಾನೇ ತೆಗೆದುಕೊಂಡ. ಹಾಗೆಂದ ಮಾತ್ರಕ್ಕೆ ಹೆಣ್ಣು ಕೃಷಿಯಿಂದ ದೂರ ಸರಿಯಲಿಲ್ಲ. ಗಂಡಿನ ಜೊತೆ ಜೊತೆಗೆ ಹೊಲದ ಎಲ್ಲ ಉಪಕಾರ್ಯಗಳಲ್ಲೂ ಕೈ ಜೋಡಿಸುತ್ತಾ ಬಂದಿದ್ದಾಳೆ. ಕೃಷಿಯ ಉತ್ಪಾದನೆಯಲ್ಲಿ ತನ್ನ ಕೊಡುಗೆಯನ್ನು ಸೇರಿಸಿದ್ದಾಳೆ. ಇಂದೂ ಕೂಡ ಹೊಲಗದ್ದೆಗಳಲ್ಲಿ ಗಂಡಿನೊಂದಿಗೆ ದುಡಿಯುತ್ತಲೇ ಬಂದಿದ್ದಾಳೆ.

ಇತ್ತೀಚೆಗೆ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಎರಡು ಹಳ್ಳಿಗಳಿಗೆ ಭೇಟಿ ನೀಡುವ ಅವಕಾಶ ಒದಗಿ ಬಂತು. ಸಣ್ಣ ಪ್ರಮಾಣದ (micro credit) ಸಾಲ ಪಡೆದು ಬೇಸಾಯಕ್ಕೆ ಅದನ್ನು ಬೆಳೆಸಿಕೊಂಡು ತಮ್ಮ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವ ಛಲ ಹೊತ್ತ ಮಹಿಳೆಯರು ಸ್ವಸಹಾಯ ಗುಂಪುಗಳನ್ನು ಮಾಡಿಕೊಂಡು ಕಾರ್ಯನಿರ್ವಹಿಸುತ್ತಿರುವ ಪರಿ ಎಂತಹವನ್ನಾದರು ದಿಗ್ಭ್ರಮೆಗೊಳಿಸಬಲ್ಲದು.

ಮುಳಬಾಗಿಲು ತಾಲ್ಲೂಕಿನಲ್ಲಿ ಕಾರ್ಯಪ್ರವೃತ್ತವಾಗಿರುವ 'ಪ್ರಕೃತಿ' ಸ್ವಸಹಾಯ ಸಂಸ್ಥೆ ಸುಮಾರು 65 ಹಳ್ಳಿಗಳಲ್ಲಿ 115 ಸ್ವಸಹಾಯ ಸಂಘ ಸಂಸ್ಥೆಗಳಿಗೆ ಚಿಕ್ಕ ಪ್ರಮಾಣದ ಸಾಲದ ನೆರವು ನೀಡುತ್ತಾ ಕಾರ್ಯ ನಡೆಸುತ್ತಿದೆ. ಈ ಸಾಲದ ಹಣದ ಲಾಭವನ್ನು ಸುಮಾರು 2700 ಹೆಣ್ಣುಮಕ್ಕಳು ಪಡೆದುಕೊಂಡು, ಆ ಹಣವನ್ನು ಬೇಸಾಯದ ಅಗತ್ಯಗಳಿಗೇ ಬಳಸಿಕೊಳ್ಳುತ್ತಿರುವುದು ಹೆಂಗಸರಿಗೆ ಕೃಷಿಯ ಒಡನಾಟದ ಬಗೆಗಿರುವ ಆಸ್ಥೆ ಮತ್ತು ಅಗತ್ಯವನ್ನು ತೋರಿಸುತ್ತದೆ.

ಮುಳಬಾಗಿಲಿನ ಮಲ್ಲಸಂದ್ರ ಹಳ್ಳಿಯಲ್ಲಿ ಸುಮಾರು 150 ಮಂದಿ ಜನವಸತಿ ಇದೆ. ಮೂರು ವರ್ಷಗಳಿಂದ ಇಲ್ಲಿ 'ರಣಬೇರಮ್ಮ ಮಹಿಳಾ ಸಂಘ'ವನ್ನು ಮಾಡಿಕೊಂಡು ಪ್ರಕೃತಿ ಸ್ವಯಂಸೇವಾ ಸಂಘದ ಮೂಲಕ ಸಾಲದ ನೆರವು ಪಡೆದು ಇಲ್ಲಿಯ ಹಳ್ಳಿಯ ಹೆಂಗಸರು ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಈ ಹಳ್ಳಿಯ ಪಕ್ಕದಲ್ಲಿಯೇ ಕುದುರನ ಹಳ್ಳಿಯ ರೇಣುಕಾಂಬ ಮಹಿಳಾ ಸಂಘವು ಕಳೆದ ಆರು ವರ್ಷಗಳಿಂದ ಗ್ರಾಮೀಣ ನೆಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇಲ್ಲಿನ ಮಹಿಳೆಯರು ಕೃಷಿಯ ಜೊತೆಗೆ ಉಳಿತಾಯ, ಆರೋಗ್ಯ ಮುಂತಾದ ವಿಷಯಗಳತ್ತ ಗಮನ ಹರಿಸುತ್ತಿದ್ದಾರೆ.

ಈ ಎಲ್ಲ ಸಂಗತಿಗಳನ್ನು ಗಮನಿಸಿದರೆ ಇತ್ತೀಚೆಗೆ ಗ್ರಾಮೀಣ ಮಹಿಳೆಯರು ಕೃಷಿಯತ್ತ ತೋರಿಸುವ ವಿಶೇಷ ಒಲವು, ಪರಿಶ್ರಮ - ಇವುಗಳನ್ನು ಕಾಣಬಹುದು. ಇಂತಹ ಒಂದು ಆರೋಗ್ಯಕರ ನಿಲುವನ್ನು ಪುಣೆ ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಗಳಲ್ಲಿ ಕಾಣಬಹುದು. ಅದರ ಒಂದು ಚಿತ್ರ ಇಲ್ಲಿದೆ.

ಪುಣೆಯ ಕೃಷಿ ಕಾಲೇಜಿನಲ್ಲಿ ಹಳ್ಳಿಯ ಯುವತಿಯರು ವ್ಯವಸಾಯದ ಓನಾಮವನ್ನು ಕಲಿಯತೊಡಗಿದ್ದಾರೆ. ಬಾರಾಮತಿಯ ದಿಯೋಕಾತ್ ಕುಟುಂಬದ ಕಬ್ಬಿನ ಬೆಳೆಯ ಇಳುವರಿ ವರ್ಷದಿಂದ ವರ್ಷಕ್ಕೆ ಕುಸಿದು, ಆದಾಯ-ನಷ್ಟದ ಪಟ್ಟಿ ನಷ್ಟದತ್ತಲೇ ವಾಲುತ್ತಿತ್ತು. ಆ ಕುಟುಂಬದ ತಾಯ್ ಎನ್ನುವ ಹುಡುಗಿ ಇದಕ್ಕೊಂದು ಪರಿಹಾರ ಕಂಡು ಹಿಡಿಯಲೇ ಬೇಕು ಎನ್ನುವ ಹಟ ತೊಟ್ಟು, ಮನೆಯಿಂದ ಮೈಲುಗಟ್ಟಲೆ ದೂರವಿರುವ ಪುಣೆಯ ಕೃಷಿಯ ಕಾಲೇಜಿಗೆ ಹೋಗತೊಡಗಿದ್ದಾಳೆ. ಆಕೆಗೆ ಹೇಗಾದರೂ ಮಾಡಿ ಕಬ್ಬಿನ ಬೆಳೆಯಲ್ಲೇ ಆದಾಯ ತರುವ ಛಲ. ಸುಧಾರಿತ ಬೇಸಾಯ, ಮಧ್ಯಂತರ ಬೆಳೆ ಮೊದಲಾದ ಮಾದರಿಗಳನ್ನು ಅಳವಡಿಸಿ ಲಾಭದಾಯಕ ಕೃಷಿ ತೆಗೆಯುವ ಶ್ರದ್ಧೆ ಯಾರಿಗಾದರೂ ಮೂಡಲೇಬೇಕು. ಹಣವಿಲ್ಲದಿದ್ದರೆ ಬದುಕು ದುಸ್ತರ, ಹುಡುಗರು ಈ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಇದಕ್ಕಾಗಿ ಮನೆಯಲ್ಲಿ ಕುಳಿತುಕೊಳ್ಳುವ ಹುಡುಗಿಯರೇ ಮುಂದೆ ಬಂದಿದ್ದೇವೆ' ಎನ್ನುತ್ತಾಳೆ ತಾಯ್.

ಪುಣೆಯ ಕೃಷಿ ಕಾಲೇಜಿನ ಕ್ಯಾಂಪಸ್‌ನಲ್ಲಿ ಸುಮಾರು 310 ಮಹಿಳೆಯರು ಉತ್ಸಾಹದಿಂದ ಓಡಾಡುತ್ತಿದ್ದಾರೆ. ಮಹಾರಾಷ್ಟ್ರ, ಕೇರಳ, ಜಮ್ಮು, ಕಾಶ್ಮೀರ, ಬಿಹಾರ ಮುಂತಾದ ಭಾಗಗಳಿಂದ ಹಲವಾರು ಉತ್ಸಾಹಿ ರೈತ ಮಹಿಳೆಯರು ಇಲ್ಲಿ ಕೃಷಿ ಕಲಿಯುತ್ತಿದ್ದಾರೆ.

ಎಲ್ಲೋ ಅಲ್ಲೊಂದು ಇಲ್ಲೊಂದು ನೇಗಿಲು ಹಿಡಿಯುತ್ತಿದ್ದ ಹಳ್ಳಿಯ ಮಹಿಳೆಯರು, ಸ್ತ್ರೀತ್ವಕ್ಕೆ ಸವಾಲು ಹಾಕುವುದನ್ನು ಹೊರತು ಪಡಿಸಿದರೆ ಇತ್ತೀಚಿನವರೆಗೂ ಕೃಷಿ ಪುರುಷಲೋಕದ ದರ್ಬಾರು ಆಗಿತ್ತು. ಆದರೆ ಈ ಕಾಲೇಜಿನಲ್ಲಿರುವ ವಿದ್ಯಾರ್ಥಿನಿಯರು ಉಳುಮೆ, ಬಿತ್ತನೆ, ಹಾಲು ಕರೆಯುವುದು, ಉತ್ಪಾದನೆಗಳನ್ನು ಸ್ಥಳೀಯ ಮಾರು ಕಟ್ಟೆಗಳಲ್ಲಿ ಮಾರಾಟ ಮಾಡುವುದು ಮೊದಲಾದ ಕೆಲಸಗಳಿಂದ ತಾವು ಯಾವುದಕ್ಕೂ ಕಡಿಮೆಯಿಲ್ಲ, ಎಂದು ತೋರಿಸಿಕೊಟ್ಟಿದ್ದಾರೆ. ತಮ್ಮ ಜೈವಿಕ ಭಿನ್ನತೆ ಶ್ರಮಕ್ಕೆ ತೊಂದರೆ ಕೊಡುವುದಿಲ್ಲ ಎನ್ನುವುದನ್ನು ಸಾಬೀತು ಪಡಿಸಿದ್ದಾರೆ. ಮಧ್ಯಮ ವರ್ಗದ ಕೃಷಿ ಕುಟುಂಬಗಳು ಹೆಚ್ಚಾಗಿ ತಮ್ಮ ಹೆಣ್ಣು ಮಕ್ಕಳನ್ನು ಕಾಲೇಜಿಗೆ ಕಳುಹಿಸಿಕೊಡುತ್ತಿದ್ದಾರೆ. ಪಡಿಲು ಬಿದ್ದ ನೆಲಗಳಲ್ಲಿ ಅವರಿಗೀಗ ಜೀವಕಳೆ ಕಾಣತೊಡಗಿದೆ. ವರ್ಷದಿಂದ ವರ್ಷಕ್ಕೆ ಈ ನೆಲದಲ್ಲಿ ಹುಡುಗಿಯರ ಸಂಖ್ಯೆ ಜಾಸ್ತಿಯಾಗುತ್ತಿದೆ. ಹುಡುಗಿಯರಿಗಾಗಿ ಮಾಡಿದ ಕಾಲೇಜ್ ಹಾಸ್ಟೆಲ್ ತುಂಬಿ ತುಳುಕುತ್ತಿದೆ' ಎಂದು

ಕಾಲೇಜಿನ ಪ್ರಾಂಶುಪಾಲ ಎ. ಎಸ್. ಜಾಧವ್ ಹೇಳುತ್ತಾರೆ.

ಬೆಳವಾಡಿಯ ಶಾಮಾ ಧೋಕೆ ತೋಟಗಾರಿಕೆ ಕಲಿಯುತ್ತಿರುವ ಏಕೈಕ ವಿದ್ಯಾರ್ಥಿನಿ. ಇದರ ಜೊತೆಗೆ ಹೈನುಗಾರಿಕೆ, ಮತ್ತಿತರ ವಿಷಯಗಳಲ್ಲೂ ಅಭ್ಯಾಸ ನಡೆಸುತ್ತಿದ್ದಾಳೆ. ತನ್ನ ಈ ನಿರ್ಧಾರ ತನ್ನ ಮತ್ತು ಇತರ ಕುಟುಂಬಗಳಿಗೆ ಮಾದರಿ ಎನ್ನುವ ಶಾಮಾ ತನ್ನ ಆಸಕ್ತಿ, ಅಭ್ಯಾಸಗಳ ಕುರಿತು ಹೆಮ್ಮೆ ವ್ಯಕ್ತಪಡಿಸುತ್ತಾಳೆ. ತನ್ನ ಕುಟುಂಬದ ಭೂಮಿಯಲ್ಲೇನಾದರೂ ಬದಲಾವಣೆ ತರಲು ಸಾಧ್ಯವೇ ಎನ್ನುವುದರ ಕುರಿತು ಯೋಚಿಸುತ್ತಿದ್ದಾಳೆ.

ಇಂದಾಪುರ್ ತಾಲ್ಲೂಕಾದ ಲಸೂರ್ನೆಯ ಸ್ಮಿತಾಲೂಂಧೆಯ ಕುಟುಂಬದಲ್ಲಿ ಆರು ಎಕರೆ ಭೂಮಿ ಇದೆ. ನೋಡಿ ಕೊಳ್ಳುವವರಿಲ್ಲದೆ ಪಡಿಲು ಬಿದ್ದಿದೆ. ಕಾಲೇಜಿನಿಂದ ಹಿಂತಿರುಗಿದ ನಂತರ ತಾನು ಏಕಾಂಗಿಯಾಗಿಯೇ ಅದರಲ್ಲಿ ಲಾಭದಾಯಕ ಬೇಸಾಯ ತೆಗೆಯಬಲ್ಲೆ ಎಂದು ವಿಶ್ವಾಸ ವ್ಯಕ್ತಪಡಿಸುತ್ತಾಳೆ. ಕೃಷಿಗೆ ಅಗತ್ಯವಿರುವ ಬೀಜ, ಕೀಟನಾಶಕ ಮತ್ತಿತರ ಪರಿಕರಗಳಿಗೆ ಹಣದ ವ್ಯವಸ್ಥೆಯಾದರೆ ತನಗೆ ಯಾವುದೇ ಹೆದರಿಕೆಯಿಲ್ಲದೆ, ಹೂವಿನ ಬೇಸಾಯ ನಡೆಸಬಹುದು ಎಂದು ಧೈರ್ಯದಿಂದ ನುಡಿಯುತ್ತಾಳೆ.

ಒಣ ಮತ್ತು ಬಂಜರು ಭೂಮಿಯನ್ನು ತನ್ನ ಕುಟುಂಬ ಒಳಗೊಂಡಿದೆ. ಇದರಲ್ಲಿ ಬೆಳೆ ತೆಗೆಯಬಹುದು. ಅದಕ್ಕೆ ಸಾಕಷ್ಟು ದುಡ್ಡು ಬೇಕು. ಈ ದುಡ್ಡು ಸಂಪಾದಿಸಲು ತಾನು ದುಡಿದು ಗಳಿಸಿದ್ದನ್ನು ಉಳಿಸಬೇಕು. ಇದಕ್ಕಾಗಿ ತಾನು ತನ್ನ ಕುಟುಂಬವನ್ನು ಒಪ್ಪಿಸುವ ಯತ್ನ ಮಾಡುತ್ತಿದ್ದೇನೆ, ಎನ್ನುತ್ತಾಳೆ ಶ್ರದ್ಧಾ ದೇಶಪಾಂಡೆ.

ಕೃಷಿ ಸಂಬಂಧಿ ಹಲವು ವಿಷಯಗಳಲ್ಲಿ ಸಲಹೆ ಪಡೆಯಲು, ರಜಾ ಕಾಲದಲ್ಲಿ ತನ್ನ ಮನೆಗೆ ಹಲವು ಜನ ಬರುತ್ತಾರೆ ಎನ್ನುವ ಹರ್ಷದಾ ದೇಶಮುಖ್, ಬಿ.ಎಸ್.ಸಿ. ಕೃಷಿ ಪದವಿ ಓದುತ್ತಿದ್ದಾಳೆ. ಪಂಡರಾಪುರದಲ್ಲಿರುವ ತನ್ನ ಊರಿನ ಜನರಿಗೆ ಕೆಲವೆಲ್ಲಾ ತಾವು ಕೇಳಿದ ವಿಷಯಗಳು ಮಾತ್ರ. ತಾನೀಗ ಅವುಗಳನ್ನು ತೋರಿಸಿಕೊಡುತ್ತಿರುವಾಗ ಅವರೆಲ್ಲಾ ಆಶ್ಚರ್ಯ ಚಕಿತರಾಗುತ್ತಿದ್ದಾರೆ. ಮಹಿಳೆಯರೂ ಕೃಷಿ ಉದ್ಯಮವನ್ನು ಲಾಭದಾಯಕವಾಗಿ ಮಾಡಬಲ್ಲರು ಎನ್ನುವುದನ್ನು ಈಗೀಗ ಅವರು ಒಪ್ಪಿಕೊಳ್ಳುತ್ತಾರೆ, ಎನ್ನುತ್ತಾಳೆ. ತನ್ನ ಮನೆಯವರಿಗೆ ಸಿವಿಲ್ ಸರ್ವೀಸಿನಲ್ಲಿ ತಾನು ತನ್ನ ಭವಿಷ್ಯ ರೂಪಿಸಬೇಕೆಂದಿತ್ತು. ಆದರೆ ತನ್ನ ಭವಿಷ್ಯ ಕೃಷಿಯತ್ತ ಚಲಿಸುತ್ತಿದೆ, ಎನ್ನುತ್ತಾಳೆ. ತನ್ನ ಹಳ್ಳಿಗರಲ್ಲಿ ಆಧುನಿಕ ಕೃಷಿ ಉದ್ಯಮದ ಬಗ್ಗೆ ಒಲವು ಮೂಡಿಸಬೇಕು ಎಂದು ಕನಸು ಕಾಣುತ್ತಿರುವ ಧನಶ್ರೀ ನಿಕಾಂ ಸತಾರದವಳು. ಹೀಗೆ ಹಲವು ರೈತ ಯುವತಿಯರು ತಮ್ಮೊಳಗಿನ ಇಚ್ಛಾಶಕ್ತಿಯನ್ನು ಕೃಷಿಯತ್ತ ಒಲವು ಬೆಳೆಸಿಕೊಳ್ಳಲು ಬಾಗಿಸುತ್ತಿದ್ದಾರೆ. ಅದರಲ್ಲೇ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಆಶಾವಾದಿಗಳಾಗುತ್ತಿದ್ದಾರೆ.

ಹಳ್ಳಿಗಳ ರೈತ ಕುಟುಂಬಗಳಿಗೆ ಈಗಲೂ ಕೃಷಿಯೇ ಜೀವನಾಧಾರ. ಹುಡುಗರಿಗೆ ಆಸಕ್ತಿಯಿಲ್ಲ. ಹುಡುಗಿಯರು ಆಸಕ್ತಿ ವಹಿಸುತ್ತಿದ್ದಾರೆ. ಈ ರೈತ ಮಹಿಳೆಯರ ನೈಜ ಆಸಕ್ತಿಯನ್ನು ಕಂಡೇ ಹೆತ್ತವರು ಪ್ರೋತ್ಸಾಹ ನೀಡುತ್ತಿದ್ದಾರೆ, ಎಂದೆನಿಸುತ್ತದೆ. ಮಾಡೆಲಿಂಗ್, ಸಿನಿಮಾ ಮೊದಲಾದೆಡೆಗಳಲ್ಲಿ ತಮ್ಮ ಸುಂದರ ಚರ್ಮ, ಮೈಕಟ್ಟುಗಳ ಬಂಡವಾಳದಿಂದ ಹಣ ಮಾಡುವ ಹುಡುಗಿಯರು ಇತ್ತ ಗಮನ ಹರಿಸಬೇಕು. ಬಿಸಿಲು, ಮಳೆಯೆನ್ನದೆ ಕೃಷಿ ಕಾರ್ಯಕ್ಕೆ ಮುಂದಾಗುತ್ತಿರುವ ಈ ಯುವತಿಯರಲ್ಲೂ ಭವಿಷ್ಯದ ಹೊಂಗನಸುಗಳಿವೆ. ಅವರ ಕನಸುಗಳಲ್ಲೂ ಓರ್ವ ಸುಂದರ ರಾಜಕುಮಾರನಿದ್ದಾನೆ. ಆದರೆ ಅವರ ಸೌಂದರ್ಯದ ಮಾನದಂಡ ಅವರ ಶ್ರಮದಿಂದ ಬೆಳೆಯುವ ಕೃಷಿ ಜಗತ್ತು. ಗಾಜಿನ ಗೋಳದ ಭ್ರಮಾಲೋಕದ ಆಮಿಷದಿಂದ ಬಿಡಿಸಿಕೊಂಡು ನೆಲದ ಮೇಲೆ ನಡೆಯುವ ದಿಟ್ಟ ಹೆಜ್ಜೆ ತೊಟ್ಟ ಈ ರೈತ ಮಹಿಳೆಯರ ಕನಸು ಸಾಕಾರಗೊಳ್ಳಲಿ.

ಆಧಾರ : ಜನವಾಹಿನಿ

★★★

ವಿಶ್ವಸಂಸ್ಥೆ ಮತ್ತು ಮಹಿಳೆ

ವಿಶ್ವಸಂಸ್ಥೆಯಲ್ಲಿ ನಿರ್ಧಾರಗಳನ್ನು ಕೈಗೊಳ್ಳುವ ಮಟ್ಟಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಮುಖವಾಗಿದೆ. ಇಲ್ಲಿ ಸುಮಾರು 25.5% ರಷ್ಟು ಮಹಿಳೆಯರು ನಿರ್ದೇಶಕಿಯರಾಗಿ, ಕಾರ್ಯ ನಿರ್ವಾಹಕರಾಗಿ 38.9%ರಷ್ಟು ಮಂದಿ ಉಪಕಾರ್ಯದರ್ಶಿಯರಾಗಿ ಆಯ್ಕೆಯಾಗಿದ್ದಾರೆ. ಇಲ್ಲಿ ಸಾಮಾನ್ಯ ಸಭೆಯಲ್ಲಿ ಮೊದಲ ಭಾರತೀಯ ಮಹಿಳಾ ಆಧ್ಯಕ್ಷೆಯಾಗಿ ವಿಜಯಲಕ್ಷ್ಮಿ ಪಂಡಿತ್ ಸೇವೆ ಸಲ್ಲಿಸಿದ್ದರು. 1995 ಬೀಜಿಂಗ್ ಮಹಿಳಾ ಅಧಿವೇಶನದ ನಂತರ ಮಹಿಳೆಯರಿಗೆ ಅಧಿಕಾರ, ಗೌರವವನ್ನು ನೀಡುವ ಪ್ರಕ್ರಿಯೆ ಆರಂಭವಾಗಿದೆ. ಸಚಿವಾಲಯದ ಉನ್ನತ ಹುದ್ದೆಗಾಗಿ ಲೂಯಿಸ್ ಫ್ರೆಕೆಟ್‌ರನ್ನು ಉಪಕಾರ್ಯದರ್ಶಿಯಾಗಿ ನೇಮಿಸಿದ್ದಾರೆ. ಡ್ಯಾನ್ಯೂಟಾ ಹೆಬ್ನಿರ್ ಅವರು ವಿಶ್ವಸಂಸ್ಥೆಯ ಯುರೋಪ್ ಪ್ರಾಂತೀಯ ಆರ್ಥಿಕ ಕಮೀಷನ್‌ನ ವಿಭಾಗಕ್ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಇವರು ಪ್ರಾಂತೀಯ ಕಮೀಷನ್‌ನ ಮೊದಲ ಮಹಿಳಾ ಅಭ್ಯರ್ಥಿ. ವಿಶ್ವಸಂಸ್ಥೆಯ ಮಕ್ಕಳ ತುರ್ತು ನಿಧಿಯ ನಿರ್ದೇಶಕಿ, ಆಹಾರ ಸಂಸ್ಥೆಯ ಕಾರ್ಯಕ್ರಮಗಳ ನಿರ್ವಾಹಕ ಕಾರ್ಯದರ್ಶಿ, ವಿಶ್ವ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕಿ ಹೀಗೆ ಮಹಿಳೆಯರೇ ಪ್ರಮುಖವಾದ ಸ್ಥಾನಗಳಲ್ಲಿದ್ದಾರೆ.

ಹೆಣ್ಣಿಗೆ ಮುಳುವಾದ ಲಿಂಗ ಪರೀಕ್ಷೆ

ಹೆಣ್ಣು ಭ್ರೂಣಹತ್ಯೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಸುಪ್ರೀಂ ಕೋರ್ಟು ನೀಡಿದ ಆದೇಶದಿಂದಾಗಿ ಕೇಂದ್ರ ಸರ್ಕಾರವು **ಜನನ ಪೂರ್ವ ಪರೀಕ್ಷೆ 1994ರ(ನಿಯಂತ್ರಣ ಮತ್ತು ಅಪಬಳಕೆಯ ತಡೆ) ಕಾಯಿದೆಯನ್ನು** ತಿದ್ದುಪಡಿ ಮಾಡಲು ನಿರ್ಧರಿಸಿದೆ. ದೇಶದಲ್ಲಿ ಇರುವ ಎಲ್ಲಾ ಅಲ್ಟ್ರಾಸೌಂಡ್ ಕ್ಲಿನಿಕ್‌ಗಳನ್ನು ನರ್ಸಿಂಗ್ ಹೋಂ ಮತ್ತು ಲ್ಯಾಬೋರೇಟರಿಗಳನ್ನು ಖಡ್ಡಾಯವಾಗಿ ನೋಂದಣಿ ಮಾಡಿಸಬೇಕಂಬುದು ಸರ್ಕಾರದ ಕ್ರಮವಾಗಿದೆ. ಈ ಸರ್ಕಾರದ ಆಜ್ಞೆಯಿಂದಾಗಿ ಎಲ್ಲಾ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಕ್ಲಿನಿಕ್‌ಗಳಲ್ಲಿ ಮುಖ್ಯದ್ವಾರದಲ್ಲೇ **ಜನನ ಪೂರ್ವ ಲಿಂಗ ನಿರ್ಧಾರಿತ ಪರೀಕ್ಷೆ ಕಾನೂನು ಬಾಹಿರ ಮತ್ತು ಶಿಕ್ಷಾರ್ಹ ಅಪರಾಧ. ಇಲ್ಲಿ ಆ ಸೇವೆಯನ್ನು ಮಾಡಲಾಗುವುದಿಲ್ಲ** ಎಂಬ ಮಾಹಿತಿಯನ್ನು ಪ್ರಮುಖವಾಗಿ ಕಾಣುವಂತೆ ಪ್ರದರ್ಶಿಸಬೇಕಿದೆ. ಈ ರೀತಿ ಪ್ರದರ್ಶಿಸದಿದ್ದಲ್ಲಿ ಐದು ವರ್ಷಗಳ ಜೈಲುವಾಸ ಮತ್ತು 50,000 ರೂಗಳ ದಂಡ ತೆರಬೇಕಾಗುತ್ತದೆ.

ಇವತ್ತು ಇದು ಕೇವಲ ಭಾರತದ ಸಮಸ್ಯೆಯಲ್ಲ. ವಿಶ್ವದಾದ್ಯಂತ ಗಮನಿಸಿದಾಗ ಹುಟ್ಟುವ ಮೊದಲೇ ಗರ್ಭಪಾತಕ್ಕೊಳಗಾಗುವ ಭ್ರೂಣಗಳ ಪ್ರಮಾಣವನ್ನು ಗಮನಿಸಿದರೆ ಹೆಣ್ಣು ಭ್ರೂಣ 42 ಗಂಡು ಭ್ರೂಣ26 ಇರುತ್ತಿದೆ. ಆದರೆ ಭಾರತದಲ್ಲಂತೂ ಶಿಶು ಮರಣದ ಸಂಖ್ಯೆಯನ್ನು ಗಮನಿಸಿದರೆ ಗಂಡು ಶಿಶುಗಳಿಗಿಂತ ಹೆಣ್ಣು ಶಿಶುಗಳು ಶೇಕಡ 40ರಷ್ಟು ಹೆಚ್ಚಿವೆ. ಇದು ಅತ್ಯಂತ ಆತಂಕದ ವಿಷಯ. 2001ರ ಜನಗಣತಿಯಿಂದ ದೊರೆತ ವಿವರಗಳಿಂದ ಸ್ಪಷ್ಟವಾಗುವುದೆಂದರೆ, 0-6 ವಯೋಮಾನದ ಶಿಶುಗಳ ಸಂಖ್ಯೆ 1991ರಲ್ಲಿ 1000 ಗಂಡು ಮಕ್ಕಳಿಗೆ 945 ಇದ್ದದ್ದು ಇಗ 927ಕ್ಕೆ ಗಮನಾರ್ಹವಾಗಿ ಇಳಿದಿದೆ. ಸಮೃದ್ಧ ರಾಜ್ಯಗಳಾದ ಹರಿಯಾಣ, ಹಿಮಾಚಲ ಪ್ರದೇಶ ಮತ್ತು ದೆಹಲಿಯಲ್ಲಿ ಈ ಗಂಡು - ಹೆಣ್ಣು ಮಕ್ಕಳ ಪ್ರಮಾಣ ದಿಢೀರನೆ ಇಳಿದಿದೆ. ಪಂಜಾಬ್‌ನಲ್ಲಿಯೂ 1991ರಲ್ಲಿ 1000 ಗಂಡಿಗೆ 874 ಹೆಣ್ಣುಗಳಿದ್ದದ್ದು 2001 ವೇಳೆಗೆ 882ಕ್ಕೆ ಇಳಿದಿದೆ.

ಹೆಣ್ಣು ಮಗುವಿನ ಬಗೆಗಿರುವ ಪೂರ್ವಾಗ್ರಹಗಳು ಕುಟುಂಬದ ರಚನೆಯಲ್ಲಿ ಮಾನವೀಯ ಸ್ಪರ್ಶವನ್ನೇ ಅಳಸಿಹಾಕಿವೆ. ಹಲವಾರು ಕುಟುಂಬಗಳಲ್ಲಿ ಮೊದಲ ಮಗುವಾಗಿ ಹೆಣ್ಣು ಮಗುವನ್ನು ಒಪ್ಪಿಕೊಂಡರೂ, ನಂತರದ ಮಕ್ಕಳು ಹೆಣ್ಣಾದರೆ ಅವುಗಳಿಗೆ ಆದರದ ಸ್ವಾಗತವಿಲ್ಲ. ಏಕೆಂದರೆ ಹೆಣ್ಣುಮಕ್ಕಳು ವರದಕ್ಷಿಣೆಯನ್ನೂ ತರುವುದಿಲ್ಲ, ಇಳಿ ವಯಸ್ಸಿನಲ್ಲಿ ನೋಡಿಕೊಳ್ಳುವುದಿಲ್ಲ ಮತ್ತು ಅಂತಿಮ ಸಂಸ್ಕಾರದಲ್ಲಿ ನೆರವಾಗುವುದೂ ಇಲ್ಲ - ಎಂಬುದು ಬಹುಪಾಲು ಮಂದಿಯ ಅಪೇಕ್ಷೆಯಾಗಿರುತ್ತದೆ. ಈ ಎಲ್ಲಾ ಕಾರಣದಿಂದಲೇ ಭ್ರೂಣ ಪರೀಕ್ಷೆಗೆ ಒಳಗಾಗಿ ಹೆಣ್ಣು ಹುಟ್ಟುವುದೆಂದು ಗೊತ್ತಾದೊಡನೆ ಕುಟುಂಬದ ಒತ್ತಾಯವೂ ಸೇರಿ ಗರ್ಭಪಾತಕ್ಕೆ ಒಳಗಾಗುತ್ತಾರೆ. ಕೊನೆಗೆ ಗಂಡು ಮಗುವಿನ ನಿರೀಕ್ಷೆಯಲ್ಲಿ ದುರ್ಬಲರಾಗುತ್ತಾ ಹೋಗುತ್ತಾರೆ.

ಮಹಾರಾಷ್ಟ್ರ ಸರ್ಕಾರವು ಭ್ರೂಣದ ಲಿಂಗ ಪರೀಕ್ಷೆಯ ವಿರುದ್ಧ ಕಾನೂನುಕ್ರಮ ತೆಗೆದುಕೊಳ್ಳುವುದರಲ್ಲಿ ಮುಂಚೂಣಿಯಲ್ಲಿದ್ದರೂ ಅಲ್ಲಿಯೂ ಹೆಣ್ಣು ಭ್ರೂಣ ಹತ್ಯೆಯ ಸಂಖ್ಯೆ ಆತಂಕಕಾರಿಯೇ ಆಗಿದೆ. ಈ ವರ್ಷ ಹತ್ಯೆಗೊಳಗಾದ 8000 ಭ್ರೂಣಗಳಲ್ಲಿ 7999 ರಷ್ಟು ಹೆಣ್ಣು ಆಗಿದ್ದವು. 1974ರಲ್ಲಿ ಆಧುನಿಕ ತಂತ್ರಜ್ಞಾನದ ಪರಿಣಾಮವಾಗಿ ಅಮ್ನಿಯೋಸಿಂಥಿಸಿಸ್ ಪರೀಕ್ಷೆಯನ್ನು ಪರಿಚಯಿಸಿದಾಗ ಅದರ ಮುಖ್ಯ ಉದ್ದೇಶ ಭ್ರೂಣದ ಆರೋಗ್ಯ ಮತ್ತು ಸ್ಥಿತಿಯನ್ನು ಪರೀಕ್ಷಿಸುವುದೇ ಆಗಿತ್ತು. ಆದರೆ ನಾಚಿಕೆಗೇಡಿನ ಸಂಗತಿಯೆಂದರೆ, ತಮ್ಮ ರೋಗಿಗಳ (ಗಿರಾಕಿಗಳ) ಅಪೇಕ್ಷೆಯಂತೆ ವೈದ್ಯರು ಲಿಂಗ ಪರೀಕ್ಷೆಯನ್ನು ಮಾಡುವ ಅನೈತಿಕ ಕಾರ್ಯದಲ್ಲಿ ತೊಡಗಿದರು.

ಇಂದಿನ ದೇಶದ ಪರಿಸ್ಥಿತಿಯನ್ನು ನೋಡಿದಾಗ ಉಂಟಾಗುವ ಗಾಭರಿ ಮತ್ತು ಅಸಹ್ಯದ ಸಂಗತಿಯೆಂದರೆ, ಪ್ರತಿವರ್ಷ ದೇಶದ 27 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು ಐವತ್ತು ಲಕ್ಷ ಹೆಣ್ಣು ಭ್ರೂಣ ಹತ್ಯೆಗಳಾಗುತ್ತಿವೆ. **1996ರಲ್ಲಿ ಜಾರಿಗೆ ಬಂದ 1994ರ ಜನನ ಪೂರ್ವ ಪರೀಕ್ಷಾ ಕಾಯಿದೆ (ನಿಯಂತ್ರಣ ಮತ್ತು ಅಪಬಳಕೆಯ ತಡೆ)**ಯಿದ್ದಾಗ್ಯೂ ಸ್ತ್ರೀ ಭ್ರೂಣ ಹತ್ಯೆಯ ಸಂಖ್ಯೆ ಇಷ್ಟೊಂದು ಆತಂಕಕಾರಿ ಎಂಬುದು ಎಲ್ಲರೂ ಯೋಚಿಸಬೇಕಾದ ವಿಷಯ.

ಭ್ರೂಣದ ಲಿಂಗವನ್ನು ಪರೀಕ್ಷಿಸುವುದನ್ನೇ ಅಪರಾಧವೆಂದು ಪರಿಗಣಿಸುವ ಈ ಕಾಯಿದೆ ಇಂತಹ ಕೃತ್ಯದಲ್ಲಿ ತೊಡಗಿರುವ ವೈದ್ಯರಿಗೆ ಮತ್ತು ಭ್ರೂಣದ ಲಿಂಗ ಪರೀಕ್ಷೆಗೆ ಒತ್ತಾಯಿಸಿದ ಕುಟುಂಬಗಳಿಗೆ ಮತ್ತು ಒಳಗಾದ ತಾಯಿಗೆ ಶಿಕ್ಷೆ ವಿಧಿಸಬಹುದಾಗಿದೆ. ಹತ್ತು ಸಾವಿರದಿಂದ 50,000ಗಳ ದಂಡ ಮತ್ತು ಮೂರರಿಂದ ಐದು ವರ್ಷಗಳ ಸೆರೆಮನೆವಾಸವು ಈ ಅಪರಾಧಕ್ಕೆ ವಿಧಿಸಿದ ಶಿಕ್ಷೆಯಾಗಿದೆ. ಆದರೆ ಈ ಕಾನೂನನ್ನು ಸಮರ್ಪಕವಾಗಿ ನಿಯಂತ್ರಿಸುವ, ಜಾರಿಗೆ ತರುವ ಕಾರ್ಯವನ್ನು ಸಂಬಂಧಪಟ್ಟ ಅಧಿಕಾರಿಗಳು ನಿರ್ವಹಿಸದಿದ್ದಲ್ಲಿ ಈ ಕಾನೂನು ಅನುಪಯುಕ್ತವಾಗುತ್ತದೆ.

ಭ್ರೂಣದ ಲಿಂಗ ಪರೀಕ್ಷೆಯು (ಕಾನೂನು ಬಾಹಿರವಾದರೂ) ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿ ಮುಖ್ಯ ಸೂತ್ರವಾಗಬಹುದು, ಎಂದು ಕೆಲವು ವೈದ್ಯರು ವಾದ ಮಾಡಬಹುದು. ಆದರೆ ತಾಯಿಯ ಆರೋಗ್ಯದ ದೃಷ್ಟಿಯಿಂದ, ಸಮಾಜದ ಒಳಿತಿನ ದೃಷ್ಟಿಯಿಂದಲೂ ಈ ಮಾರ್ಗ ಸರಿಯಿಲ್ಲ. ಭ್ರೂಣದ ಲಿಂಗ ಪರೀಕ್ಷೆಯ ಜ್ಞಾನವನ್ನು ಸದುಪಯೋಗಮಾಡಿಕೊಂಡು ಕಾನೂನಿನ ಬಲದಿಂದ ಅದನ್ನು ಅಪಬಳಕೆಯಾಗದಂತೆ ತಡೆಯಬೇಕು, ಜೊತೆಗೆ ಸಮಾಜದ ಗರ್ಭದಲ್ಲಿ ಹುದುಗಿರುವ ಮೂಢನಂಬಿಕೆ, ಅನಕ್ಷರತೆ, ಅಜ್ಞಾನಗಳನ್ನು ತೊಡೆದುಹಾಕುವ ಕಾರ್ಯವೂ ಜೊತೆ ಜೊತೆಗೆ ಸಾಗಬೇಕು. ಸಮಾಜದಲ್ಲಿ ಸ್ತ್ರೀಪುರುಷರ ಆರ್ಥಿಕ, ಸಾಮಾಜಿಕ, ರಾಜಕೀಯ ಸಮಾನತೆಗಾಗಿ ಹೋರಾಟ ನಡೆಯುವವರೆಗೂ ಈ ಹೋರಾಟವು ಯಶಸ್ಸು ಕಾಣದು. ★

ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಯೋಜನೆ:

ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದು ಸಾಮಾಜಿಕವಾಗಿ ಶೋಷಿತರಾದವರ ಅಭಿವೃದ್ಧಿಗಾಗಿ ವಿಶೇಷ ಒತ್ತುಕೊಟ್ಟು ಅವರಿಗೆ ಸಾಮಾಜಿಕ ನ್ಯಾಯ ಒದಗಿಸಿದಲ್ಲಿ ಮಾತ್ರ ಸಮಾನತೆ ಸಾಧಿಸುವುದು ಸಾಧ್ಯ. ಇದು "ಸರ್ವೇ ಜನಾಃ ಸುಖಿನೋಭವಂತು" ಎಂಬ ಧ್ಯೇಯ ಈಡೇರಿಕೆಗೆ ಕಾರಣವಾಗುವುದು. ದೂರದೃಷ್ಟಿ ನಾಯಕ ಶ್ರೀ ಎಸ್. ಎಂ. ಕೃಷ್ಣ ಅವರ ನೇತೃತ್ವದ ಪ್ರಸಕ್ತ ಸರ್ಕಾರದ ಮಹೋದ್ದೇಶವೇ ಇದು. ಈ ದಿಸೆಯಲ್ಲಿ, ಸರ್ಕಾರ ಹಿಂದುಳಿದವರ, ಅಲ್ಪಸಂಖ್ಯಾತರ, ದೀನದಲಿತರ ಹಾಗೂ ಶೋಷಿತರ ಕಲ್ಯಾಣಕ್ಕಾಗಿ ನೂತನ ಕಾರ್ಯಕ್ರಮಗಳನ್ನು ರೂಪಿಸಿ. ಅನುಷ್ಠಾನಕ್ಕಿಳಿಸುವ ಮೂಲಕ ಅವರಲ್ಲಿ ಹೊಸ ಆಶಾಕಿರಣವನ್ನೇ ಮೂಡಿಸಿದೆ.

ಸಮಾಜ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಅಭಿವೃದ್ಧಿ:-

★ ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ 6,10,733 ಫಲಾನುಭವಿಗಳಿಗೆ ರೂ. 86 ಕೋಟಿ ನೆರವು.

★ ಪ್ರಸಕ್ತ ಸಾಲಿನಲ್ಲಿ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ. 108.07 ಕೋಟಿ ಅನುದಾನ.

★ 20 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು ಹಾಗೂ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಮಂಜೂರು. ಒಟ್ಟು ಸಾಮರ್ಥ್ಯ 1,050 ವಿದ್ಯಾರ್ಥಿಗಳು.

★ ಒಟ್ಟು ರೂ. 585.49 ಲಕ್ಷಗಳ ವೆಚ್ಚದಲ್ಲಿ 40 ಮೆಟ್ರಿಕ್ - ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಪೂರ್ಣ. 2,55,769 ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ರೂ. 271.42 ಲಕ್ಷ, 91,621 ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ. 257,07 ಲಕ್ಷ ವಿದ್ಯಾರ್ಥಿವೇತನ ವಿವರಣೆ.

★ ರೂ. 532.37 ಲಕ್ಷಗಳ ಮೌಲ್ಯದ 1,67,340 ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಸೌಲಭ್ಯ.

★ ಮಾಂಗಲ್ಯ ಭಾಗ್ಯ ಯೋಜನೆಯಡಿಯಲ್ಲಿ ರೂ. 22.10 ಲಕ್ಷಗಳ ವೆಚ್ಚದಲ್ಲಿ 442 ಫಲಾನುಭವಿಗಳಿಗೆ ಆರ್ಥಿಕ ಸಹಾಯ.

★ 15,296 ಫಲಾನುಭವಿಗಳಿಗೆ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಮಗದ ಮೂಲಕ ರೂ. 2,119.17 ಲಕ್ಷ ಆರ್ಥಿಕ ನೆರವು.

ಅಲ್ಪಸಂಖ್ಯಾತರ ಅಭಿವೃದ್ಧಿ:-

★ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿಯೇ ಪ್ರತ್ಯೇಕ ಇಲಾಖೆ 1999-2000ನೇ ಸಾಲಿನಿಂದ ಕಾರ್ಯಾರಂಭ. ಪ್ರಸಕ್ತ ಸಾಲಿನಲ್ಲಿ ಈ ಇಲಾಖೆಯ ಕಾರ್ಯಕ್ರಮಗಳ ಜಾರಿಗಾಗಿ ರೂ. 263.40 ಲಕ್ಷ ಅನುದಾನ ಬಿಡುಗಡೆ.

★ ಶಿವಮೊಗ್ಗ, ಬಳ್ಳಾರಿ, ಹುಬ್ಬಳ್ಳಿ ಮತ್ತು ಬೆಳಗಾಂ ನಗರಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಸೌಲಭ್ಯಗಳಿಗಾಗಿ ರೂ. 60.00 ಲಕ್ಷಗಳ ವೆಚ್ಚ.

★ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರಿಗಾಗಿ ಬೆಂಗಳೂರು, ಮೈಸೂರು, ಧಾರವಾಢ, ಮಂಗಳೂರು ಮತ್ತು ಗುಲ್ಬರ್ಗಾ ನಗರಗಳಲ್ಲಿ 5 ವಿದ್ಯಾರ್ಥಿನಿಲಯಗಳ ಸ್ಥಾಪನೆ.

★ ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಗಾಗಿ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಅಲ್ಪಸಂಖ್ಯಾತ ಸ್ವಯಂಸೇವಾ ಸಂಸ್ಥೆಗಳಿಗೆ ಗರಿಷ್ಠ ರೂ. 5 ಲಕ್ಷ ಅನುದಾನ. ಈ ಉದ್ದೇಶಕ್ಕಾಗಿ ರೂ. 50 ಲಕ್ಷ ಮೀಸಲು

★ ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಐ.ಟಿ.ಐ/ಡಿಪ್ಲೋಮಾ ತರಗತಿಗಳ 840ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ರೂ. 9.25 ಲಕ್ಷ ಶಿಷ್ಯವೇತನ.

★ 52 ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿ.

★ ರೂ. 1,536,42 ಲಕ್ಷಗಳ ವೆಚ್ಚದಲ್ಲಿ 12,047 ಫಲಾನುಭವಿಗಳಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ನೆರವು.

★ ಸಾಧಿಸಿದ್ದು ಬಹಳಷ್ಟು, ಸಾಧಿಸಬೇಕಾಗಿರುವುದು ಇನ್ನೂ ಬಹಳಷ್ಟು.

- ಕರ್ನಾಟಕ ವಾರ್ತೆ

ಕಾನೂನಿನ ಕಣ್ಣಿಗೆ ಮಣ್ಣೆರೆಚುವ ಗಂಡ

ಆ ಹುಡುಗಿ ಬರಿ ಪಿ.ಯು.ಸಿ. ಓದಿದಾಕೆ. ವಿದ್ಯೆಯಲ್ಲಿ ಚುರುಕಿಲ್ಲ ಎಂದು ಕಂಡಾಗ ಸಂಪ್ರದಾಯಸ್ಥ ಪೋಷಕರು ಹೆಣ್ಣುಮಕ್ಕಳ ಬಗ್ಗೆ ಚಿಂತಿಸುವುದು ಒಂದೇ ರೀತಿ. ವಿದ್ಯೆಯಿಲ್ಲದಿದ್ದರೆ ಮದುವೆ ! ಈ ಹುಡುಗಿಯ ವಿಚಾರದಲ್ಲೂ ಹಾಗೇ ಆಯಿತು. 17ವರ್ಷಕ್ಕೇ ಒಬ್ಬ 'ವಿದ್ಯಾವಂತ' ನೆಂದು 'ಬುದ್ಧಿವಂತನೆಂದೂ' ಭಾವಿಸಿದ ಗಂಡಿಗೆ ಕೊಟ್ಟು ಮದುವೆ ಮಾಡಲಾಯಿತು. ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ, ಕಾನೂನಿನಲ್ಲಿ ಸ್ನಾತಕೋತ್ತರ ಪದವಿ, ಹೀಗೆ ವಿಪರೀತ ಓದಿದ ಆತ ಒಳಗೊಳಗೇ ಧನವಾಹಿಯಾಗಿದ್ದ. ಈ ಕಡಿಮೆ ಓದಿದ ಹುಡುಗಿಯನ್ನು ಆತ ಕೈಹಿಡಿದಿದ್ದೇ ಅವಳು ಅಪ್ಪಾ ಅಮ್ಮನ ಏಕೈಕ ಸುಪುತ್ರಿಯೆಂದು. ಅವಳ ತಾಯಿ ಮತ್ತು ತಂದೆ ಇಬ್ಬರೂ ಸರ್ಕಾರಿನೌಕರರಾಗಿದ್ದಾರಿಂದ ಅವರ ಸ್ವಂತ ಮನೆ, ರಿಟೈರ್ ಆದ ಮೇಲೆ ಬರುವ ಲಕ್ಷಗಟ್ಟಲೆ ಹಣ ಎಲ್ಲಕ್ಕೂ ಅವಳೇ ಒಡತಿಯೆಂದು!

ಅವನು ಸರ್ಕಾರಿ ಉದ್ಯೋಗಸ್ಥ. ಪಿ.ಯು.ಸಿ. ಓದಿದ, ತುಂಬ ಸರಳಳಾದ, ಅತಿ ಚುರುಕಿಲ್ಲದ ಹೆಂಡತಿಯನ್ನು ಹೇಗೆ ಹೇಗೋ ಮಾಡಿ ಒಂದು ಉದ್ಯೋಗಕ್ಕೆ ಅಂಟಿಸಿಯೇ ಬಿಟ್ಟ. ಸಂಸಾರ ರಥ ಸಾಕಷ್ಟು ವರ್ಷ ಚಲಿಸಿತು. ಹುಟ್ಟಿದ ಮಗ ಮತ್ತು ಮಗಳನ್ನು ಹೆಂಡತಿಯ ಕೆಲಸದ ನೆಪ ಒಡ್ಡಿ ಅತ್ತೆ ಮನೆಗೆ ತಂದು ಬಿಟ್ಟುಬಿಟ್ಟ. ತಾನೋ ಸಕಲ ದುಃಶ್ಚಟಗಳ ದಾಸನಾದ. ಧನದಾಹ ಏರಿತು. ಹೆಂಡತಿಯ ಹೆಸರಲ್ಲಿ ಒಂದು ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯನ್ನು ಸ್ಥಾಪಿಸಿ ಸರ್ಕಾರದಿಂದ ಲಕ್ಷಗಟ್ಟಲೆ ಸಾಲಪಡೆದ. ಆ ಪಾಪದ ಹೆಣ್ಣು ತನ್ನ ಕೆಲಸ ಬಿಟ್ಟು ಗಂಡ ತನ್ನ ಹೆಸರಿನಲ್ಲಿ ಸ್ಥಾಪಿಸಿದ ಇಂಡಸ್ಟ್ರಿಯನ್ನು ಅನುಭವವೇ ಇಲ್ಲದಿದ್ದಾಗ ನೋಡಿಕೊಳ್ಳತೊಡಗಿದಳು. ಈ ವ್ಯವಹಾರದಲ್ಲಿ ಪಾರ್ಟನರ್‌ಗಳಾಗಿ ಒಂದೆರಡು ಜನ ಅವನ ಗೆಳೆಯರೇ ಇದ್ದರು. ಈ ಹುಡುಗಿಯ ಸರಳತೆಯನ್ನು ಚೆನ್ನಾಗಿಬಂಡವಾಳ ಮಾಡಿಕೊಂಡು, ಈ ಚಾಣಾಕ್ಷನ ದುಃಶ್ಚಟಗಳಿಗೆ ಆಗೀಗ ಆಸರೆಯಾಗುತ್ತಾ ಚೆನ್ನಾಗಿ ನಡೆಯುತ್ತಿದ್ದ ಇಂಡಸ್ಟ್ರಿಯ ಒಳಗಿನ ಹೆಗ್ಗಣಗಳಾದರೂ ನಷ್ಟದಲ್ಲಿ ಇಂಡಸ್ಟ್ರಿ ಮುಚ್ಚಿಹೋಯಿತು. ಹೆಂಡತಿ ಮತ್ತೊಂದು ಕಡೆ ಕೆಲಸಕ್ಕೆ ಸೇರಿ ಮತ್ತೆ ಗಳಿಸುತ್ತಾ ಬಂದ ಸಮಸ್ತ ಸಂಬಳವನ್ನೂ ಈ ಬಡಿಯುವ ಕೋಪಿಸುವ ಗಂಡನನ್ನು ಒಲಿಸಿ ಕೊಳ್ಳಲು ನೀಡುತ್ತಾ ಬದುಕು ಕಳೆದಳು.

ಒಂದು ಕೆಟ್ಟ ಮುಂಜಾನೆ ಕೋರ್ಟಿನಿಂದ ಸಮನ್ಸ್ ಬಂತು. ಅದರ ಪ್ರಕಾರ ಈ ತರುಣಿ ಸರ್ಕಾರದಿಂದ ಲಕ್ಷಾಂತರ ಹಣ ಪಡೆದು, ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯನ್ನು ಪ್ರಾರಂಭ ಮಾಡಿ ಹಲವು ವರ್ಷ ನಡೆಸಿದ್ದರೂ. ಕಟ್ಟಬೇಕಾದ ಒಂದೇ ಒಂದು ಕಂತನ್ನೂ ಕಟ್ಟಿರಲಿಲ್ಲ. ಇದು ಒಂದು ಅಪರಾಧವಾದರೆ, ಎರಡನೇ ಅಪರಾಧ ಸರ್ಕಾರಕ್ಕೆ ತಿಳಿಸದೇ ಇಂಡಸ್ಟ್ರಿಯನ್ನು ಮುಚ್ಚಿಹಾಕಿದ್ದು! ಹುಡುಗಿ ಕಂಗಾಲಾದಳು. ''ನಾನೇನು ಮಾಡಲಿ ನೀನು ಸರಿಯಾಗಿ ಇಂಡಸ್ಟ್ರಿ ನಡೆಸಿದ್ದಿದ್ದರೆ ಹೀಗಾಗುತ್ತಿರಲೇ ಇಲ್ಲ. ಈಗ ಜೈಲಿಗೆ ಹೋಗು'' ಎಂದ ಗಂಡಭೂಪ! ಈ ವೇಳೆಗೆ ಹುಡುಗಿಯ ತಂದೆ ತಾಯಿಯರು ರಿಟೈರ್ ಆಗಿ ಆಗ ಬಂದ ಹಣವನ್ನು ಈ ಅಳಿಯದೇವರು ಪೂಸಿ ಹೊಡೆದು ಆಗಿಷ್ಟು ಈಗಿಷ್ಟು ಕಸಿದು ಅವರ ಬ್ಯಾಂಕ್ ಖಾತೆಯನ್ನು ಬರಿದೇ ಮಾಡಿಬಿಟ್ಟಿದ್ದ. ಇದೇ ನೋವಿನಲ್ಲಿ ಹುಡುಗಿಯ ಅಪ್ಪ ತೀರಿಕೊಂಡಿದ್ದರು. ಅಮ್ಮ ಎರಡು ಮೊಮ್ಮಕ್ಕಳ ಮಣಭಾರವನ್ನು ಕುತ್ತಿಗೆಗೆ ಕಟ್ಟಿಕೊಂಡು ರಿಟೈರ್ ಆದ ನಂತರವೂ ಎಲ್ಲೋ ಕೆಲಸ ಮಾಡುತ್ತಾ, ಪಿಂಚಣಿಯೊಂದಿಗೆ ಹೊಸ ಉದ್ಯೋಗದ ಪುಡಿ ಹಣವನ್ನು ಸೇರಿಸಿಕೊಂಡು ಕಾಲ ನೂಕುತ್ತಿದ್ದರು.

ಈ ಚಾಣಾಕ್ಷ ರಾತ್ರೋರಾತ್ರಿ ಹುಡುಗಿಯನ್ನು ತನ್ನ ಪರಿಚಿತರ ಮನೆಗೆ ಬೊಂಬಾಯಿಗೆ ಅಟ್ಟಿಬಿಟ್ಟ, ಅಲ್ಲಿಂದ ತನ್ನೆಲ್ಲ ಕುತಂತ್ರಗಳನ್ನೂ ಬಳಸಿ ದುಬೈಗೆ ರವಾನಿಸಿ ಬಿಟ್ಟ. ಇದೀಗ ಹುಡುಗಿ ಯಾವುದೋ ಕಂಪನಿಯಲ್ಲಿ ದುಬೈನಲ್ಲಿ ರಿಸೆಪ್ಷನಿಸ್ಟ್ ಆಗಿ ದುಡಿದು ಬದುಕುತ್ತಿದ್ದಾಳೆ. ಕಾನೂನಿನ ಪ್ರಕಾರ ಅವಳು ಇನ್ನೂ ಹದಿನಾಲ್ಕು ವರ್ಷ ಈ ದೇಶಕ್ಕೆ ಬರದೇ ಇದ್ದು ನಂತರ ಬಂದರೆ ಸರ್ಕಾರಕ್ಕೆ ಆಕೆಯನ್ನು ಬಂಧಿಸುವ ಹಕ್ಕಿಲ್ಲವಂತೆ. ಇದು ಕಾನೂನಿನ ಸ್ನಾತಕ್ಕೋತ್ತರ ಪದವಿ ಪಡೆದ ಗಂಡನ ಚತುರೋಪಾಯ! ತಾನು ಕಟ್ಟಿಸಿರುವ ಸ್ವಂತ ಮನೆಯಲ್ಲಿ ಮತ್ತೊಬ್ಬಳ ಜೊತೆ ಹಾಯಾಗಿ ಬದುಕುತ್ತಿರುವ ಈ ಜಾಣನಿಗೆ ದುಬೈ ಹೆಂಡತಿಯ ಚಿಂತೆಯೇ ಇಲ್ಲ. ಎಸ್.ಎಸ್.ಎಲ್.ಸಿ. ಓದುತ್ತಿರುವ ಮಗ ಅಪ್ಪನ ಅವಗುಣಗಳನ್ನೆಲ್ಲಾ ಭಟ್ಟಿ ಇಳಿಸಿಕೊಂಡು ಅಜ್ಜಿಯ ಅಂಕೆಗೆ ಸಿಗದೆ ಪುಟ್ಟರೌಡಿಯಾಗಿ ಬೆಳೆಯುತ್ತಿದ್ದಾನೆ. 5ನೇ ತರಗತಿಯಲ್ಲಿ ಓದುತ್ತಿರುವ ಮಗಳು ಮಾತ್ರ ಅಪ್ಪ ಅಮ್ಮ ಬದುಕಿದ್ದೂ 'ಅನಾಥಪ್ರಜ್ಞೆ'ಯಲ್ಲಿ ನರಳುತ್ತಿದ್ದಾಳೆ.

- ಅಚಲ

★ ★ ★

ದುಬಾರಿಯಾದ ತಾಯ್ತನ!

2001 - ಈ ವರ್ಷವನ್ನು ಭಾರತಸರ್ಕಾರವು ಮಹಿಳಾ ಸಶಕ್ತ ವರ್ಷವನ್ನಾಗಿ ಆಚರಿಸಲು ಘೋಷಿಸಿದೆ. ಈ ಆಚರಣೆಯ ಸಂಬಂಧವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಾಹೀರಾತುಗಳನ್ನು ಪ್ರಕಟಿಸುತ್ತಿದೆ. ''ಆಸ್ಪತ್ರೆಯಲ್ಲಿ ಮಾತ್ರ ಹೆರಿಗೆ ಮಾಡಿಸಿಕೊಂಡು ನಿಮ್ಮ ಮಗುವನ್ನು ಪಡೆದುಕೊಳ್ಳಿ'' ಎನ್ನುವುದು ಸರ್ಕಾರದ ಜಾಹಿರಾತು. ಆದರೆ ಇದು ಕಾರ್ಯಗತವಾಗಬೇಕಾದರೆ ಗ್ರಾಮೀಣ ಪ್ರದೇಶಗಳ ಮೂಲೆ ಮೂಲೆಗಳಲ್ಲಿ ಹೆರಿಗೆ ಆಸ್ಪತ್ರೆಯನ್ನು ತೆರೆಯಬೇಕಾದ ಜವಾಬ್ದಾರಿಯನ್ನು ಆರೋಗ್ಯ ಇಲಾಖೆ ನಿರ್ವಹಿಸಿದೆಯೇ?

ಕೇಂದ್ರಾಡಳಿತ ಪ್ರದೇಶವಾದ ಲಕ್ಷದ್ವೀಪದಲ್ಲಿ ಹೆರಿಗೆ ಆಸ್ಪತ್ರೆಯ ಸೌಕರ್ಯವಿಲ್ಲ. ಹೆರಿಗೆಗೆಂದೇ ಮಹಿಳೆಯರು ಹಡಗಿನಲ್ಲಿ ಪ್ರಯಾಣಿಸಿ ಕೇರಳದಲ್ಲಿ ಬಂದು ಹೆರಿಗೆ ಮಾಡಿಸಿ ಕೊಂಡು ಹಿಂತಿರುಗಿ ತಮ್ಮ ದ್ವೀಪಗಳಿಗೆ ಹೋಗುತ್ತಾರೆ. ಹಸುಗೂಸುಗಳ ತಾಯಂದಿರಿಗೆ ಇದು ತ್ರಾಸದಾಯಕವಷ್ಟೇ ಅಲ್ಲ ಇಂತಹ ಹೆರಿಗೆಗಳಿಂದ ಅವರಿಗೆ ಹುಟ್ಟುವ ಮಕ್ಕಳು ಬುಡಕಟ್ಟಿನ ಜನಾಂಗದ ಹಕ್ಕುಗಳಿಂದ ವಂಚಿತರಾಗುತ್ತಾರೆ.

1951ರ ಭಾರತ ಸರ್ಕಾರದ ಸರ್ಕಾರಿ ಆಜ್ಞೆಯು ಬುಡಕಟ್ಟು ಜನಾಂಗದ ಹಕ್ಕುಗಳು ನಿರ್ದಿಷ್ಟಪ್ರದೇಶದಲ್ಲಿ ಹುಟ್ಟುವುದಕ್ಕೆ ಅನ್ವಯಿಸುವಂತೆ ರೂಪಿತವಾಗಿದೆ. ಲಕ್ಷದ್ವೀಪದ ರಾಜಧಾನಿಯಾದ ಕವರತ್ತಿಯಲ್ಲಿ ಕೂಡ ಉತ್ತಮ ಹೆರಿಗೆ ಆಸ್ಪತ್ರೆಯಿಲ್ಲ. ಹಾಗಾಗಿ ಹೆರಿಗೆಗೆಂದು ಹತ್ತಿರದ ಕೇರಳಕ್ಕೆ ಹೋಗಿ ಮಕ್ಕಳಿಗೆ ಜನ್ಮಕೊಡಲು ಬಯಸುವ ತಾಯಂದಿರು ತಮ್ಮ ಮಕ್ಕಳಿಗೆ ಬುಡಕಟ್ಟು ಸಮುದಾಯದ ಹಕ್ಕುಗಳನ್ನು ಇಲ್ಲದಂತೆ ಮಾಡಿದಂತಾಗುತ್ತದೆ. ಇದೇ ಪದ್ಧತಿ ಅಸ್ಸಾಂಗೆ ವಲಸೆ ಹೋದ ಬಿಹಾರದ ಸಂತಾಲರಿಗೂ ಅನ್ವಯಿಸುತ್ತದೆ. ಸರ್ಕಾರದ ಈ ಆದೇಶದ ಬಿಸಿಯು ಪ್ರಮುಖ ರಾಜಕಾರಣಿಗಳಿಗೂ ತಟ್ಟದೇ ಇಲ್ಲ. ಲೋಕಸಭೆಯ ಡೆಪ್ಯುಟಿ ಸ್ಪೀಕರ್ ಪಿ. ಎಂ. ಸಯೀದ್‌ರಿಗೆ ಅವರ ಮಗ ಕೇರಳದಲ್ಲಿ ಹುಟ್ಟಿದ ಕಾರಣಕ್ಕಾಗಿ ಬುಡಕಟ್ಟು ಹಕ್ಕುಗಳನ್ನು ಕಳೆದು ಕೊಳ್ಳಬೇಕಾಯಿತು. ಅಂತೂ 'ತಾಯ್ತನ' ಎಷ್ಟೊಂದು ದುಬಾರಿಯಲ್ಲವೆ?

★ ★ ★

ನೀರಜಾ ಬಾನೋಟ್ ಪ್ರಶಸ್ತಿ ವಿಜೇತೆ

ಈ ಬಾರಿಯ 2001ರ ನೀರಜಾ ಬಾನೋಟ್ ಪ್ರಶಸ್ತಿಯ ಸನ್ಮಾನ ತಮಿಳುನಾಡಿನ ಯಶೋದಾಗೆ ಸಂದಿದೆ. ತಮಿಳುನಾಡಿನ ತಿರುವಳ್ಳೂರು ಜಿಲ್ಲೆಯ ವ್ಯಾಪ್ತಿಯ ಸುಮಾರು ಅರವತ್ತು ಹಳ್ಳಿಗಳಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿಗಾಗಿ ದುಡಿಯುತ್ತಿರುವ ಮಹಿಳಾ ಗ್ರಾಮೀಣ ಕೇಂದ್ರದ ಸಾರಥ್ಯ ನಲವತ್ತೂರು ವರ್ಷದ ಯಶೋದಾರದು. ಈ ಹಳ್ಳಿಗಳಲ್ಲಿ ಕಳ್ಳಭಟ್ಟಿ ಸಾರಾಯಿಯ ಹಾವಳಿಯ ವಿರುದ್ಧ ಯಶೋದಾರ ನಿರಂತರ ಸಮರ ನಡೆದಿದೆ. ಈ ಸಮರದಲ್ಲಿ ತನ್ನ ಏಕೈಕ ಪುತ್ರಿಯನ್ನು ಕಳೆದ ವರ್ಷ ಕಳೆದುಕೊಂಡ ಹತಭಾಗ್ಯೆ ಯಶೋದಾ. ಸ್ಥಳೀಯ ಸಾರಾಯಿ ಲಾಬಿಯ ಗೂಂಡಾಗಳು ಯಶೋದಾಳ ಬದುಕಿಗೆ ಗಂಡಾಂತರಿಗಳಾಗಿದ್ದಾರೆ. ಅವಳ ಇಪ್ಪತ್ತು ವರ್ಷ ವಯಸ್ಸಿನ ಮಗಳು ಇಂದಿರಾಳನ್ನು ಹತ್ಯೆಗೈದದ್ದಲ್ಲದೆ, ಅವಳ ಅಕ್ಕನನ್ನೂ ಕಲ್ಲಿನಿಂದ ಉಜ್ಜಿ ಸಾಯಿಸಿದ್ದಾರೆ. ಈ ಎಲ್ಲ ದುರಂತಗಳಿಂದ ಯಶೋದ ಮನನೊಂದರೂ, ಧೃತಿಗೆಡದೆ ಹೋರಾಟದ ಪ್ರತೀಕವಾಗಿ ಗ್ರಾಮೀಣ ಬಡಮಹಿಳೆಯರ ಅಭಿವೃದ್ಧಿಗಾಗಿ ತನ್ನ ಹೋರಾಟವನ್ನು ನಡೆಸಿಯೇ ಇದ್ದಾರೆ.

ಯಶೋದಾರ ಧೈರ್ಯ ಸಾಹಸ ಮತ್ತು ಸಾಮಾಜಿಕ ಕಳಕಳಿಯ ಗೌರವಾರ್ಥ ಆಕೆಗೆ 2001ರ ನೀರಜಾ ಬಾನೋಟ್ ಪ್ರಶಸ್ತಿಯನ್ನು ಕೊಡಲಾಗಿದೆ. ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳ ಮೊತ್ತ ಮತ್ತು ಫಲಕವನ್ನೊಳಗೊಂಡ ಈ ಪ್ರಶಸ್ತಿಯು ವಾರ್ಷಿಕ ಸನ್ಮಾನವಾಗಿದ್ದು ಗತಿಸಿದ ಗಗನಸಖಿ ನೀರಜಾ ಬಾನೋಟ್‌ಳ ನೆನಪಿನಲ್ಲಿ ಕೊಡಲಾಗುತ್ತಿದೆ. ಸಾಮಾಜಿಕವಾಗಿ ಅನ್ಯಾಯ, ದೌರ್ಜನ್ಯಕ್ಕೊಳಗಾದ, ಮಹಿಳೆಯಾಗಿ, ಆ ಕೂಪದಿಂದ ಗೆದ್ದು ಹೊರಬಂದು ಸಾಮಾಜಿಕ ಕಳಕಳಿಯಿಂದ ಶೌರ್ಯ, ಸಾಹಸಗಳನ್ನು ಮೆರೆಯುವ ಭಾರತೀಯ ಮಹಿಳೆಗೆ ಈ ಪ್ರಶಸ್ತಿಯನ್ನು ಕೊಡಲಾಗುತ್ತದೆ. ರಾಜಸ್ಥಾನದ ಭಾಂವ್ರಿದೇವಿಯೂ ಈ ಪ್ರಶಸ್ತಿಯಿಂದ ಸನ್ಮಾನಿತಳಾದವಳು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕರಾಚಿಯ ವಿಮಾನ ನಿಲ್ದಾಣದಲ್ಲಿ ಭಾರತೀಯ ವಿಮಾನವು ಅಪಹರಣವಾದಾಗ ಆದಾಗ, ಆ ವಿಮಾನದಲ್ಲಿದ್ದ ನೂರಾರು ಪ್ರಯಾಣಿಕರನ್ನು ರಕ್ಷಿಸುವಲ್ಲಿ ತನ್ನ ಜೀವದ ಹಂಗು ತೊರೆದು ಹೋರಾಡಿ ಗತಿಸಿದ ದಿಟ್ಟ ಮಹಿಳೆ ನೀರಜಾ ಬಾನೋಟ್. ಅವರ ನೆನಪಿನ ಈ ಪ್ರಶಸ್ತಿಯನ್ನು ತಿರುವಳ್ಳೂರಿನ ಯಶೋದಾ ಸೆಪ್ಟೆಂಬರ್ 6 ರಂದು ಚಂಡೀಗಢದಲ್ಲಿ ವಿಶೇಷ ಸಮಾರಂಭವೊಂದರಲ್ಲಿ ಪಡೆದರು.

★ ★ ★

ಕಾಂತೆಯರು ಮತ್ತು ಕ್ರಾಂತಿ

(ನಾವು ಒಳ್ಳೆಯ ಪುಸ್ತಕಗಳನ್ನು ಓದಿದಾಗ ಅದರಲ್ಲಿ ಮುಖ್ಯವೆನಿಸುವ ಹಾಗೂ ಕೆಲವೊಮ್ಮೆ ಖುಷಿ ನೀಡುವ ಅಂಶಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳಲು ಇಷ್ಟವಾಗುತ್ತದಲ್ಲವೆ? ಅದಕ್ಕೆಂದೆ ಈ ಅಂಕಣ. ಈ ಅಂಕಣದಲ್ಲಿ ನೀವೂ ನಿಮ್ಮ ಮೆಚ್ಚಿನ ಆಯ್ದ ಭಾಗಗಳನ್ನು ನಮ್ಮ ಓದುಗರೊಂದಿಗೆ ಹಂಚಿಕೊಳ್ಳಿ.)

''ಚೀನಾದ ಸಾಹಿತ್ಯ ಆಂದೋಲನವನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. 1907ರಿಂದ 1927ರ ವರೆಗಿನ ಎರಡು ದಶಕದ ಸಾಹಿತ್ಯದ ಮತ್ತು 1927ರಿಂದ 37ರ ವರೆಗಿನ ಒಂದು ದಶಕದ ಸಾಹಿತ್ಯವನ್ನು 'ಸಾಹಿತ್ಯದ ಕ್ರಾಂತಿಯಿಂದ, ಕ್ರಾಂತಿಕಾರಕ ಸಾಹಿತ್ಯದವರೆಗೆ' ಎಂದು ಕರೆಯಲಾಗುತ್ತದೆ. ಈ ಕಾಲದಲ್ಲಿ ಅನೇಕ ಮಹಿಳೆಯರೂ 'ಕ್ರಾಂತಿ'ಯ ಸತ್ವ ಹೊತ್ತ ಕೃತಿಗಳನ್ನು ರಚಿಸಿದರು ಎನ್ನುವುದು ಗಮನಾರ್ಹ ಅಂಶ. ಅಂಥವರಲ್ಲಿ ಷಿ-ಮಿಂಗ್ ಒಬ್ಬಾಕೆ. ಈಕೆಯ ನಿಜನಾಮಧೇಯವನ್ನು ತೆರೆಯ ಮರೆಯಲ್ಲೇ ಇರಿಸಬೇಕಾದ ಅನಿವಾರ್ಯತೆ ಇತ್ತು ಎಂದು ತಿಳಿಯುತ್ತದೆ. ಈಕೆ ಪ್ರಾಂತೀಯ ಸರಕಾರದ ಮೇಲ್ತರಗತಿಯ ಅಧಿಕಾರಿ ಹಾಗೂ ಶ್ರೀಮಂತನ ಮಗಳು ಎಂದೂ, ಹು-ಷೆ ಎಂಬಲ್ಲಿ 1908ರಲ್ಲಿ ಹುಟ್ಟಿದಳು ಎಂದೂ ದಾಖಲೆಯಾಗಿದೆ.''

''ಷಿ-ಮಿಂಗ್ ಕಥೆಗಳು ಅಷ್ಟೊಂದು ಪ್ರಸಿದ್ಧಿ ಪಡೆಯಲಿಲ್ಲ ಎನ್ನುವುದು ಒಂದುವಾದ. ಆದರೆ ತರುಣ ಮತ್ತು ಸತ್ವಯುತ ಬರಹಗಾರರ ಮೇಲೆ ಷಿ-ಮಿಂಗ್ ತನ್ನ ವೈಯಕ್ತಿಕ ಪ್ರಭಾವವನ್ನು ಪ್ರಬಲವಾಗಿ ಬೀರಿದ್ದಾಳೆ ಎಂದು ಇತಿಹಾಸ ತಿಳಿಸುತ್ತದೆ. ಚೀನೀ ಸಾಹಿತ್ಯದಲ್ಲಿ ಅದುವರೆವಿಗೆ ಮೈಲಿಗೆ ಎಂಬಂತೆ ದೂರವಿರಿಸಿದ್ದ ಸಾಮಾಜಿಕ ದ್ರವ್ಯವನ್ನು ಷಿ-ಮಿಂಗ್ ನಿರ್ಭಯವಾಗಿ ಬಳಸಿದ್ದಾರೆ. (ಈ ಕಾರಣಕ್ಕೇ ತನ್ನ ಹೆಸರು ಮುಚ್ಚಿಟ್ಟಿರಬಹುದೇ?) 'ಚೀನಾ ಸಾಹಿತ್ಯಕ್ಕೆ ತನ್ನ ಹಳೆ ಪರಂಪರೆಯನ್ನು ಮುರಿದು, ತೀಕ್ಷ್ಣ ಕ್ರಾಂತಿಕಾರಕ ಪ್ರಗತಿಯನ್ನು ಹೊಂದುವ ಸಾಧ್ಯತೆಯೇ ಇಲ್ಲ' ಎಂದು ನಂಬಿ ಕೂತಿದ್ದವರು ಬೆಚ್ಚಿಬೀಳುವಂತೆ ಕ್ರಾಂತಿಯ ವಸ್ತುನಿಷ್ಠತೆ ಈಕೆಯ ಸಾಹಿತ್ಯದ ತಿರುಳಾಗಿದೆ.

'ಕಳೆದ ದಿನಚರಿಯ ಒಂದು ತುಣುಕು' ಎನ್ನುವ ನೀಳ್ಗತೆಯಲ್ಲಿ ಕಾಂತೆಯರು ಕ್ರಾಂತಿಗಿಳಿದಾಗ ಪುರುಷರಿಗಿಂತ ಏನೆಲ್ಲ ತೊಡರುಗಳನ್ನೆದುರಿಸಬೇಕಾಗುತ್ತದೆ ಎನ್ನುವ ವಾಸ್ತವಿಕ ಸತ್ಯವೇ ವಸ್ತುವಾಗಿದೆ. 'ಚೆಂಗ್' ದಂಪತಿಗಳು ಕ್ರಾಂತಿಕಾರಿಗಳಾಗಿದ್ದಾರೆ. ಅವರು, ಅವರಂಥ ಅನೇಕ ಯುವಕ ಯುವತಿಯರು ಕ್ರಾಂತಿಮಾಡುತ್ತಿರುವುದು ಪ್ರಾಂತೀಯ ಪಾಳೆಗಾರರ ಸರ್ಕಾರದ ವಿರುದ್ಧ. ಕ್ರಾಂತಿಗೂ ಬಡತನಕ್ಕೂ ತೀರಾ ಹತ್ತಿರದ ಸಂಬಂಧ. ಚೆಂಗ್ ದಂಪತಿಗಳು ಇಲಿಯ ಬಿಲದಂಥಾ ಒಂದು ಮನೆಯಲ್ಲಿ ಇಲಿ, ಹೆಗ್ಗಣ, ಕೆಲವೊಮ್ಮೆ ಹಾವು ಸಹ ಹಣುಕು ಹಾಕುವುದನ್ನೆ ಸಹಿಸುತ್ತಾ ಬದುಕಿದ್ದಾರೆ. ಯಥಾಪ್ರಕಾರ ಮನೆಮಾಲಿಕನಿಗೆ ಹಲವಾರು ತಿಂಗಳಿಂದ ಬಾಡಿಗೆ ಕೊಟ್ಟಿಲ್ಲ. ತಿನ್ನುವುದಕ್ಕೂ ಒಪ್ಪುತ್ತಿದ್ದರೆ ಇನ್ನೊಪ್ಪತ್ತಿಲ್ಲ. ಇಂಥ ಸ್ಥಿತಿಯಲ್ಲಿ ಈ ಕಥಾನಾಯಕಿ ಗರ್ಭಿಣಿಯಾಗಿ ಪಡುವ ಪಾಡು ಈ ಕಥೆಯ ಒಟ್ಟು ಸಾರ. ತನ್ನ ಗರ್ಭದ ಬಗ್ಗೆ ನಾಯಕಿ ''ನಾವೆಂಥ 'ಅನಿವಾರ್ಯ ವ್ಯವಹಾರ'ದಲ್ಲಿ ಬದುಕುತ್ತಿದ್ದೇವೆ. ಇದನ್ನೂ ಈ ಹೆಣ್ಣಿನ 'ಗರ್ಭ' ಒಂದಿಷ್ಟೂ ಲೆಕ್ಕಿಸಬಾರದೇ? ಅದಕ್ಕೇನು ತಾನೇ ದೊಡ್ಡ 'ವ್ಯವಹಾರ' ತಾನೇ ದೊಡ್ಡ 'ಅನಿವಾರ್ಯ'. ತಾನು ನಿಂತದ್ದೇ ಕಾಲ! ಇದಕ್ಕೆ ನ್ಯಾಯ, ತರ್ಕ, ಏನೂ ಇರಬಾರದೇ?.. ಬಸಿರು ಬಯಕೆ ಎನ್ನುವುದು ಭಾಗ್ಯವಂತರ ಭೇನೆ. ನಮ್ಮಂಥ ದಿಕ್ಕಿಲ್ಲದ ದರಿದ್ರರಿಗೂ ಎಂಥ ಔದಾರ್ಯದಿಂದ ಈ ಮಹಾ ವ್ಯಥೆಯನ್ನು ಕೊಟ್ಟಿದೆಯಲ್ಲ ಈ ಸೃಷ್ಟಿ? ಎಂದು ಚಿಂತಿಸುವ ಆಕೆ ಬಯಕೆ ಬೇನೆಗಳಿಂದ ನಿತ್ರಾಣಳಾಗುತ್ತಾಳೆ. ಮೊದಲೇ ಸರಿಯಾದ ಆಹಾರವಿಲ್ಲ, ಜೊತೆಯಲ್ಲಿ ಗರ್ಭದ ಕಾರಣ, ಬೆಳಗಿನ ನಿತ್ರಾಣ ವಾಂತಿ ಬಯಕೆ ಬೇನೆಗಳು ಆಕೆಯನ್ನು ನೆಲ ಹತ್ತಿಸಿ ಬಿಡುತ್ತದೆ. 'ಚೆಂಗ್' ಕ್ರಾಂತಿ ಕೆಲಸಗಳ ಜೊತೆ ಹೆಂಡತಿಯ ಈ ಸ್ಥಿತಿಗೆ ಅಧೀರನಾಗುತ್ತಾನೆ. ನಾಯಕಿ ಯೋಚಿಸುತ್ತಾಳೆ'' ನನಗೆ ಈ ಬಸಿರು ಬೇಡವಾಗಿದೆ. ನನ್ನ ಹೊಟ್ಟೆಯನ್ನು ನಾನೇ ಚಿವುಟುತ್ತೇನೆ, ಹಿಚುಕುತ್ತೇನೆ, ಬಡಿದುಕೊಳ್ಳುತ್ತೇನೆ. ಹೊಟ್ಟೆಯೊಳಗಿನ ಈ ಕ್ಷುದ್ರ ಜಂತು, ಸತ್ತು ಹೋಗಲಿ ಎಂದು ಕೊಳ್ಳುತ್ತೇನೆ. ಆದರೆ ಏನು ಹೇಳಲಿ! ನಾನು ಹೊಡೆದುಕೊಂಡ ಒಂದೊಂದು ಹೊಡೆತಕ್ಕೆ ಪ್ರತಿಯಾಗಿ ತನ್ನ ಇದ್ದ ಬದ್ದ ಶಕ್ತಿಯನ್ನೆಲ್ಲ ಏಕೀಕರಿಸಿ ನನ್ನ ಹೃದಯ ಒಳಗಿನಿಂದ ನನಗೆ ಛೀ ಹಾಕುತ್ತದೆ. ಎರಡು ಭಾವಗಳ ಒಳತೋಟಿ ನಡೆದಿದೆ. ಒಂದು ಸ್ವಾರ್ಥ ಮತ್ತೊಂದು ನಿಸ್ವಾರ್ಥ. ನನ್ನ ಮಗು ನನಗೆ ಬದುಕಿ ಉಳಿಯಲಿ ಎನ್ನುವುದು ಸ್ವಾರ್ಥ. ನಾನು ಬದುಕುಳಿದು ದೇಶಸೇವೆಯಾಗಲಿ ಎನ್ನುವುದು ನಿಸ್ವಾರ್ಥ.

'ಚೆಂಗ್' ಪೋಲೀಸರಿಗೆ ಸಿಕ್ಕಿ ಬೀಳುತ್ತಾನೆ. ನಾಯಕಿ ತನ್ನ ಬಸಿರನ್ನು ತೆಗೆಸಿ ಬಿಡುವ ನಿರ್ಧಾರ ಮಾಡಿ 'ಲೀ' ಎನ್ನುವಾತನ ಮನೆಗೆ ಹೋಗುತ್ತಾಳೆ 'ಲೀ' ಯ ಹೆಂಡತಿ ಡಾಕ್ಟರ್ ಆಗಿರುತ್ತಾಳೆ. ಅವರ ಮನೆಯ ವಿಷಯ ತಿಳಿಸುತ್ತಾ

ನಾಯಕಿ ಹೇಳುತ್ತಾಳೆ. ''ಲೀ ಅಣ್ಣನಿಗೆ ಯಾವಾಗಲೂ ಕ್ರಾಂತಿಕಾರಕ ಚಳುವಳಿಯ ಕೆಲಸವೇ ವೈತುಂಬ ಇದ್ದುದರಿಂದ ಹಣ ಅವನ ಹತ್ತಿರ ಇರುತ್ತಲೇ ಇರಲಿಲ್ಲ. ತನ್ನ ಹೆಂಡತಿಯನ್ನು ಒಬ್ಬೊಂಟಿಯಾಗಿ ಬಿಟ್ಟು ಎಷ್ಟೋ ವಾರ, ಎಷ್ಟೋ ತಿಂಗಳು. ಅವನು ಎಲ್ಲೆಲ್ಲೋ ಗುಪ್ತವಾಗಿರಬೇಕಾಗುತ್ತಿತ್ತು. ಈಕೆ ಬಸಿರು ಇದ್ದಿದ್ದ ಹೊತ್ತಿಗೆ ಅವನು ಏನಾದರೂ ಸಂಕಟದಲ್ಲಿರುತ್ತಿದ್ದನು. ಇದರಿಂದ ಈಕೆಯ ಎದೆಗೆ ಧಕ್ಕೆಯಾಗಿ ಚಿಂತೆಸಂತಾಪಗಳಿಂದ, ಹತ್ತಿರ ಆರೈಕೆಗೆ ಸಾಕಷ್ಟು ಹಣವಿಲ್ಲದಿದ್ದರಿಂದ ಕಷ್ಟ ಪಡಬೇಕಾಗುತ್ತಿತ್ತು. ಏಳು ಸಲ ಆಕೆ ಹಡೆದಳು. ಏಳೂ ಕೂಸುಗಳು ಮೃತವಾಗಿಯೇ ಹುಟ್ಟಿದವು''!!

''ಏಳು ಸಲ! ಅಬ್ಬ!! ಇಂಥ ಈ ಭಯಂಕರ ದಿವ್ಯದೊಳಗಿನಿಂದ ಒಬ್ಬ ಹೆಣ್ಣು ಹೆಂಗಸು ಏಳು ಸಲ ಹಾಯ್ದು ಹೋಗುವುದೆಂದರೇನು! ಸಾಧ್ಯವೇ? ಕಾಂತೆಯರು ಮತ್ತು ಕ್ರಾಂತಿ ಈ ಜಗದ ಇತಿಹಾಸದಲ್ಲಿ, ಹಾಡಿ ಹೇಳಾಲಾಗದೆ ಇರುವ ಇಂಥೆಂಥ ವೀರ ಕರುಣಾಜನಕ ಪ್ರಸಂಗಗಳ ಮಹಾಕಾವ್ಯಗಳು ಮೌನದಲ್ಲಿಯೇ, ಅಡಗಿಹೋಗಿದೆಯಲ್ಲ!?''

ಸಂಗ್ರಹ : ಶಾಂತಾನಾಗರಾಜ್

ಜೋದ್‌ಪುರದ ಪಾಲಿ ಜಿಲ್ಲೆಯ ಬಾಲಿ ಗ್ರಾಮದಲ್ಲಿ ಗಣೇಶ ಚತುರ್ಥಿಯ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಸಾಮೂಹಿಕ ವಿವಾಹ ಸಮಾರಂಭದಲ್ಲಿ ದೇವಾಸಿ ಸಮುದಾಯದ ಸುಮಾರು 80 ಮಂದಿ ಹಾಲುಗಲ್ಲದ ಹಸುಗೂಸುಗಳು ಪತಿ ಪತ್ನಿಯರಾದರು ಎಂದು ವರದಿಯಾಗಿದೆ. ತಮಗೆ ಅರಿವಿಲ್ಲದೆ ಸತಿ - ಪತಿಗಳಾಗುತ್ತಿದ್ದ ಕೆಲವು ಮಂದಿ ಹಸುಳೆಗಳು ಅಪ್ಪ, ಅಮ್ಮನ ಮಡಿಲಲ್ಲಿ ನಿದ್ರಿಸುತ್ತಿದ್ದರು. ಬಾಲ್ಯ ವಿವಾಹವನ್ನು ನಿಷೇಧಿಸುವ ಸರ್ದಾ ಕಾಯ್ದೆಯನ್ನು ಉಲ್ಲಂಘಿಸಿ ಈ ಮದುವೆ ನಡೆದಿದೆಯಾದರೂ ಯಾರ ವಿರುದ್ಧ ಕೂಡ ಕೇಸು ದಾಖಲಾಗಿಲ್ಲ, ಎಂದು ವರದಿ ತಿಳಿಸಿದೆ. ಇಲ್ಲಿನ ಪ್ರಮುಖ ಮಾರ್ಕೆಟ್ ಮತ್ತು ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಆದ್ದೂರಿಯಿಂದ ವಿವಾಹ ಮೆರವಣಿಗೆ ನಡೆಸಿ ಮದುವೆ ಸಮಾರಂಭವನ್ನು ನೆರವೇರಿಸಿದರು.

ರಾಜಾರಾಂ ಮೋಹನ್‌ರಾಯ್‌ರ ಕಾಲದಿಂದ ಇಂದಿನ ಭಾಂವ್ರಿದೇವಿಯವರೆಗೂ ಬಾಲ್ಯವಿವಾಹದ ವಿರುದ್ಧ ಹೋರಾಟ ನಡೆದೇ ಇದೆ. ಇದು ಎಲ್ಲಿಯವರೆಗೆ? ನಮ್ಮ ಮುಂದಿನ ಯಕ್ಷಪ್ರಶ್ನೆಯಿದು.

RNI No. 45577/88

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

To :
Smt/Sri

CPMG/KA/BG-8/2001
Book-Post/News Letter